(ಅನುಬಂಧ IV)

ಆ. ಕೈಗಾರಿಕಾ ನಿಯೋಜನೆ (ಸ್ಥಾಯಿ ಆದೇಶಗಳು) (ಕರ್ನಾಟಕ ತಿದ್ದುಪಡಿ) ವಿಧೇಯಕ, 2005

ಪರ್ಯಾಲೋಚನಾ ಪ್ರಸ್ತಾವ

ಶ್ರೀ ತನ್ವೀರ್ ಸೇಠ್ (ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, 2005ರ ಕೈಗಾರಿಕಾ ಯೋಜನೆ (ಸ್ಥಾಯಿ ಆದೇಶಗಳು) (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ತನ್ವೀರ್ ಸೇಠ್ (ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಯಾವುದೇ ಒಂದು ಕೈಗಾರಿಕಾ ಸ್ಥಾಪನೆಯಾದ ಸಂದರ್ಭದಲ್ಲಿ, ಮಾಲೀಕರು ಮತ್ತು ಕಾರ್ಮಿಕರ ಮಧ್ಯೆ, ಒಂದು ಸ್ಥಾಯಿ ಆದೇಶವನ್ನು ರೂಪಿಸಿ, ಅದನ್ನು ಇಲಾಖೆಯ ಮಂಜೂರಾತಿಗಾಗಿ ಕಳುಹಿಸುವಂತಹ ಪದ್ಧತಿ ಇದುವರೆವಿಗೂ ಇತ್ತು. ಈಗ ತಂದಿರುವ ತಿದ್ದುಪಡಿಯ ಉದ್ದೇಶ, ನಿಯೋಜನೆ ಕರಡು ಸ್ಥಾಯಿ ಆದೇಶಗಳು ತಯಾರಿಸಿ ಅದನ್ನು ಅಳವಡಿಸಿ ಕೊಳ್ಳುವ ಮುನ್ನ ಕಾರ್ಮಿಕ ಸಂಘಟನೆಗಳು ಅಥವಾ ಕಾರ್ಮಿಕ ಪ್ರತಿನಿಧಿಗಳ ಜೊತೆಗೆ ಚರ್ಚಿಸಿ ಇದನ್ನು ಕಾರ್ಯರೂಪಕ್ಕೆ ತರುವಂತಹದ್ದು, ಯಾವ ಸಂದರ್ಭದಲ್ಲಿ ಕಾರ್ಮಿಕ ಪ್ರತಿನಿಧಿ ಹಾಗೂ ಮಾಲೀಕರ ಮಧ್ಯೆ ವಿವಾದವುಂಟಾಗುತ್ತದೆ, ಕೇವಲ ಅಂತಹ ಸಂದರ್ಭಗಳಲ್ಲಿ ಮಾತ್ರ ನಮ್ಮ ಇಲಾಖೆಗೆ ಕಳುಹಿಸಿಕೊಡುವುದು ಇದರ ಉದ್ದೇಶವಾಗಿದೆ. ಈ ಕಾರಣದಿಂದ ಯಾವುದೇ ಒಂದು ಕಾರ್ಖಾನೆಯಲ್ಲಿ ಮಾಲೀಕರು ಮತ್ತು ಕಾರ್ಮಿಕರ ಮಧ್ಯೆ ಒಂದು ಉತ್ತಮ ಬಾಂಧವ್ಯ ಮೂಡಿಸುವ ದಿಸೆಯಲ್ಲಿ ಈ ತಿದ್ದುಪಡಿಯನ್ನು ತರಲಾಗಿದೆ ಎಂದು ಸಭೆಯ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೆ, ಸಾ ್ಯಂಡಿಂಗ್ ಆರ್ಡರ್ಸ್ ಅನ್ನು ತಾವು ಇಲಾಖೆಯವರಿಂದ ತರಿಸಿಕೊಂಡು ನೋಡಿ; ಇನ್‌ದಿ ಇಂಟ್ರೆನ್ಸ್ ಆಫ್ ಲೇಬರ್ ಇದೆಯಾ ಅಥವಾ ಇನ್ ದಿ ಇಂಟ್ರೆಸ್ಟ್ ಆಫ್ ದಿ ಆರ್ಗನೈಷನ್ ಇದೆಯಾ ಎಂಬುದನ್ನು ನೋಡಬೇಕಾದ್ದು, ಇದುವರೆಗೆ ಮೊದಲಿನಿಂದಲೂ ಕಾನೂನಿನಲ್ಲಿ ಇತ್ತು. ಯಾವುದೋ ಒಂದು ಪೆಟ್ಟಿ ಗ್ರೂಪ್ ಅನ್ನು ನಿಲಿಸಿಕೊಂಡು ಬಿಟ್ಟು ನಾನು ಅವನನ್ನು ರೆಕಗ್ನೈಸ್ ಮಾಡಿದ್ದೇನೆ, ಅವನು ಒಪ್ಪಿದ್ದಾನೆ, ನಾವು ಸಾ ್ಯಂಡಿಂಗ್ ಆರ್ಡರ್ಸ್ ಅನ್ನು ಪ್ರೇಮ್ ಮಾಡಿಕೊಂಡಿದ್ದೇನೆಂದರೆ, he need not ho and enroll himself, ಅದೇ ಲೇಬರ್ ಯೂನಿಯನ್ ಅಂತ ನೀವು ಶಾಸನ ತಂದರೆ ಗತಿಯೇನು? ಮ್ಯಾನೆಜ್‌ಮೆಂಟ್ ಸದಾ ಕಾಲಕ್ಕೆ ರೆಕಗ್ನೈಸ್ ಮಾಡುತ್ತದೆಂದು ಯಾವ ಗ್ಯಾರಂಟಿ? ತಾವು ಮಂತ್ರಿಗಳು ಯೋಚನೆ ಮಾಡಬೇಕು, ಇವತ್ತು ಯಾವುದೋ ಒಂದು ಮ್ಯಾನೇಜ್‌ಮೆಂಟ್ ಬೇಕಾದ 56 ಜನ ಆಫೀಸ್ ಬೇರರ್ಸ್ ಇಟ್ಟುಕೊಂಡು ಅವರ ಜೊತೆ ನಾನು ನೆಗೋಸಿಯೆಟ್ ಮಾಡಿದ್ದೇನೆ, ರಾಜೀ ಮಾಡಿಕೊಂಡಿದ್ದೇನೆ, ನಿಮ್ಮ ಲೇಬರ್ ಇಲಾಖೆಯ ಮುಂದೆ ಈ ಸ್ಟ್ಯಾಂಡಿಂಗ್ ಆರ್ಡರ್ಸ್ ತೆಗೆದುಕೊಂಡು ಹೋಗಿ ಅಪ್ರೂವಲ್ ತೆಗೆದುಕೊಳ್ಳುವ ಅಗತ್ಯವಿಲ್ಲವೆಂದು ಮಾಡಿಕೊಂಡು, ನಾಳೆ ಡಿಸ್ಪುಟ್ ಆದರೆ ತಾವೇನು ಮಾಡುತ್ತೀರಿ? Why are you giving so much relaxatoion to the companies or

factories to enroll themselves? ಸರ್ಕಾರದ ಅಧೀನದಲ್ಲಿ ಒಂದು ಸ್ಟ್ಯಾಂಡಿಂಗ್ ಆರ್ಡರ್ ಇದ್ದು ನಾಳೆ ಕಾರ್ಮಿಕರಿಗೆ ಏನೇನು ಹಿತರಕ್ಷಣೆಯಾಗಬೇಕೆಂಬುದನ್ನು ನೋಡಿಕೊಳ್ಳುವುದು ಬಿಟ್ಟು, ಅವರಿಗೆ ಬಿಟ್ಟು ಬಿಟ್ಟು ಅವರವರೇ ರಾಜಿಯಾದರೆ ನಮ್ಮ ಹತ್ತಿರ ಬರುವ ಅಗತ್ಯವಿಲ್ಲವೆಂದು ಶಾಸನ ತಂದರೆ, ನಾಳೆ ಆಗುವ ಡಿಸ್ಪ್ಯೂಟ್‌ಗಳಿಗೆ ಎನು ಉತ್ತರ ಹೇಳುತ್ತೀರಿ? ನಾಳೆ ಇಲ್ಲಿ ಡಿಸ್ಪ್ಯೂಟ್ ಬರುತ್ತದೆ. ನಾನು ಅವರನ್ನು ರೆಕಗ್ನೈಸ್ ಮಾಡಲಿಲ್ಲ, ಆ ಲೇಬರ್ ಯೂನಿಯನ್‌ರವರು ಮಾಡಿಕೊಂಡರು, ನೆಗೋಷಿಯೇಷನ್‌ಗೆ ನಾನು ಜವಾಬ್ದಾರನಲ್ಲವೆಂದು ಇನ್ನೊಂದು ಯೂನಿಯನ್ ಡಿಸ್ಪ್ಯೂಟ್ ಮಾಡಿದರೆ ತಾವೇನು ಹೇಳುತ್ತೀರಿ? ರೆಕಗ್ನೈಸ್ ಯೂನಿಯನ್ ಎಂಬ ಇಲ್ಲಿ ಇಲ್ಲ, ಕಾರ್ಮಿಕರೊಡನೆ ಒಪ್ಪಂದ ಮಾಡಿಕೊಂಡುಬಿಟ್ಟರೆ ಸಾಕು, ಯಾರೋ ಹತ್ತು ಜನ ಕಾರ್ಮಿಕರಿಗೆ ಅವನು ಪ್ಯಾಂಪರ್ ಮಾಡಿಕೊಳ್ಳುತ್ತಾನೆ ಇಟ್ಟುಕೊಳ್ಳುತ್ತಾನೆ, ನಾನು ಸ್ಟ್ಯಾಂಡಿಂಗ್ ಆರ್ಡರ್ ಅನ್ನು ಮಾಡಿಕೊಂಡಿದ್ದೇನೆ, ರಿಜಿಸ್ಟರ್ಡ್ ಎಂದು ಹೇಳಿಬಿಡುತ್ತಾನೆ ಆಗ ಸರಿಹೋಗಿಬಿಡುತ್ತದೆಯೇ?

ಶ್ರೀ ಜಿ. ಎ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ನಾನು ಈ ಬಿಲ್ ಅನ್ನು ವಿರೋಧ ಮಾಡುತ್ತೇನೆ, ಏಕೆಂದರೆ, "consultation with the workers" ಎಂದಿದೆ "recognized union" ಎಂದಿಲ್ಲ ಯಾವುದೇ ಮ್ಯಾನೇಜ್‌ಮೆಂಟ್ ಸ್ಟ್ಯಾಂಡಿಂಗ್ ಆರ್ಡರ್ಸ್ ಅನ್ನು ಪಾಸ್ ಮಾಡುವ ಮೊದಲು ರೆಕಗ್ನೈಸ್ ಯೂನಿಯನ್ ಜೊತೆ ಚರ್ಚೆ ಮಾಡಿ, ಅವರ ಅಭಿಪ್ರಾಯ ಅನುಮತಿಯನ್ನು ಪಡೆದುಕೊಂಡು ಸಲ್ಲಿಸಬೇಕು. ಆ ರೀತಿ ಪಡೆಯದೆ ಇರುವಂತಹ ಸಂದರ್ಭದಲ್ಲಿ ನೀವು ಮ್ಯಾನೇಜ್‌ಮೆಂಟ್‌ನವರಿಗೆ, ಯಾರೋ ಹತ್ತು ಜನರ ಸಹಿ ಮಾಡಿಸಿಕೊಂಡು ನಾವು ವರ್ಕರ್ಸ್ ಅನ್ನು ಕನ್ಸಲ್ಟ್ ಮಾಡಿದ್ದೇವೆಂದು ಸ್ಟ್ಯಾಂಡಿಂಗ್ ಆರ್ಡರ್ಸ್ ಹೊರಡಿಸಿಬಿಟ್ಟರೆ, ನಾಳೆ ಕಾರ್ಮಿಕರ ಗತಿಯೇನು? ಎರಡನೆಯದಾಗಿ ಆ ಸ್ಟ್ಯಾಂಡಿಂಗ್ ಆರ್ಡರ್ಸ್ ಸರಿ ಇದೆಯಾ ಅದು ಕಾರ್ಮಿಕರ ಪರವಾಗಿದೆಯೇ ಇಲ್ಲವೇ ಎಂಬುದನ್ನು ಪರಿಶೀಲನೆ ಮಾಡುವ ಅಥಾರಿಟಿ ಇಲ್ಲಿ ಯಾರು ಇಲ್ಲಿ? ಕೊಶ್ಚನ್ ಮಾಡತಕ್ಕಂತಹವರು ಯಾರು? ಯಾರೂ ಇಲ್ಲ ನಾವು ರಾಜೀ ಮಾಡಿಕೊಂಡಿದ್ದೇವೆಂದು ಆ ಫ್ಯಾಕ್ಟರಿ ಒನರ್ ನಿಮಗೆ ಸ್ಟ್ಯಾಂಡಿಂಗ್ ಆರ್ಡರ್ಸ್ ಎಂದು ಒಂದು ರಿಸಲ್ಯೂಷನ್ ಪಾಸ್ ಮಾಡಿಕೊಟ್ಟು ಬಿಟ್ಟರೆ, ನೀವು ಅದನ್ನು ಒಪ್ಪುವುದಾದರೆ, ಅಸರಲ್ಲಿರುವ ಲೇಬರ್ ಲಾಸ್ ಏಯೋಬ್ ಆಗಿದೆಯಾ ಇಲ್ಲವೇ, ವೆಲ್‌ಫೇರ್ ಎನಾಗಿದೆ, ಕಾನ್ಸ್‌ಟ್ಯೂಷನ್‌ನಲ್ಲಿ ಗ್ಯಾರಂಟಿ ಮಾಡಿರುವ ರೈಟ್ಸ್ ಎನಾಗಿದೆ? ಅದನ್ನು ಚೆಕ್ ಆಫ್ ಮಾಡುವ ಅಥಾರಿಟಿ ಯಾರು? ಅವರಿಬ್ಬರೂ ರಾಜೀ ಮಾಡಿಕೊಂಡು ಬಿಟ್ಟಿದ್ದೇವೆಂದು ಹೇಳಿದರೆ, ನೀವು ರಾಜಿ ಮಾಡಿಕೊಂಡಿರುವುದರಿಂದ ನಮಗೆ ಸಂಬಂಧವಿಲ್ಲ, ನಮ್ಮ ಹತ್ತಿರ ಬರುವ ಅಗತ್ಯವಿಲ್ಲವೆನ್ನುವುದಾದರೆ, ಆತ ನಾಲ್ಕು ಜನರ ಹತ್ತಿರ ರಾಜಿ ಮಾಡಿಕೊಳ್ಳುತ್ತಾನೆ, ಉದಾಹರಣೆಗೆ ಟಯೋಟಾದವರದೇ ನಿಮ್ಮ ಕಣ್ಣಮುಂದೆ ಇದೆ, ಯಾರೋ ನಾಲ್ಕು ಜನರನ್ನು ಕರೆದುಬಿಟ್ಟು ನಾವು ನೆಗೊಷಿಯೇಟ್ ಮಾಡುತ್ತೆವೆಂದು ಹೇಳುತ್ತಾರೆ, They don't want to negotiate with the recongnised union. ಆ ರೀತಿ ಸ್ಟ್ಯಾಂಡಿಂಗ್ ಆರ್ಡರ್ಸ್ ನೋಡತಕ್ಕಂಥ ಸಂದರ್ಭದಲ್ಲಿ ನೀವು ರೆಕಗ್ನೈಸ್ ಯೂನಿಯನ್ ಎಂಬ ಪದವನ್ನು ಇಲ್ಲಿ ಸೇರಿಸಬೇಕು, ಬರೀ ವರ್ಕರ್ಸ್ ಎಂದು ಹೇಳಿಬಿಟ್ಟರೆ, ಇವತ್ತು ದೇಶದಲ್ಲಿ ಮ್ಯಾನೇಜ್‌ಮೆಂಟ್ ಪರವಾಗಿರುವ ವರ್ಕರ್ಸ್

ಕೂಡ ಇದ್ದಾರೆ, ಮೆಜಾರಿಟಿ ವರ್ಕರ್ಸ್ ಎಂಬುದಾದರೂ ಇರಬೇಕು ಅಥವಾ ರೆಕಗ್ನೈಸ್ ಯೂನಿಯನ್ ಎಂದಾದರೂ ಇರಬೇಕು ವರ್ಕರ್ಸ್ ಎಂದು ಹೇಳಿದರೆ 10 ಜನರಾದರೂ ಆಗಬೇಕು 5 ಜನರಾದರೂ ಆಗಬಹುದು, Then what will be the fate of the workers ? ದಯವಿಟ್ಟು ಇದನ್ನು ವಾಪಸ್ ತೆಗೆದುಕೊಳ್ಳಿ ಇಲ್ಲವೇ ಅದನ್ನು ತಿದ್ದುಪಡಿ ಮಾಡಿ.

ಶ್ರೀ ತನ್ವೀರ್ ಸೇಠ್ : ಮಾನ್ಯ ಉಪಾಧ್ಯಕ್ಷರೆ, ಸ್ಪಷ್ಟವಾಗಿ ಕಾರ್ಮಿಕ ಸಂಘಟನೆಗಳೆಂಬುದನ್ನು ಇಲ್ಲಿ ನಮೂದಿಸಲಾಗಿದೆ, It is mentioned; " to provisions for drafting standing orders by the employer and discuss with the trade union and if there is so Trade Union with the representatives of workmen before adoption".

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಟ್ರೇಡ್ ಯೂನಿಯನ್ ಎಂಬುದು ಸಿಂಗಲ್ ಆಯಿತು, ಒಂದು ರೆಕಗ್ನೈಸ್ ಯೂನಿಯನ್ ಅಂತ ಇರಬೇಕು ಮೆಜಾರಿಟಿ ಎಂಪ್ಲಾಯಿಸ್ ಯಾವುದಕ್ಕೆ ಸಪೋರ್ಟ್ ಮಾಡುತ್ತಾರೋ ಆದಾಗಿರುತ್ತದೆ.

ಶ್ರೀ ತನ್ವೀರ್ ಸೇಠ್ : ಒಂದು ಕಾರ್ಖಾನೆಗೆ ಸಂಬಂಧಿಸಿದಂತೆ ಮಾತನಾಡುವ ಸಂದರ್ಭದಲ್ಲಿ, ಪ್ರತಿಯೊಂದು ಕಾರ್ಖಾನೆಯಲ್ಲಿ ಕಾರ್ಮಿಕ ಸಂಘಟನೆಯ ಜೊತೆಗೆ . . . . .

ಶ್ರೀ ಕೆ. ಜಯಪ್ರಕಾಶ ಹೆಗ್ಡೆ : ತಾವೇನು ಹೇಳುತ್ತೀರಿ ಅದು ರೈಟಿಂಗ್‌ನಲ್ಲಿ ಬರಬೇಕು, ನಿಮ್ಮ ಆಲೋಚನೆ ಮೆಜಾರಿಟಿ ಯೂನಿಯನ್ ಎಂದಿರಬಹುದು.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಸೀಕ್ರೆಟ್ ಬ್ಯಾಲೇಟ್ ಎಲೆಕ್ಷನ್ ಇದೆ, ರೆಕಗ್ನೈಸ್ ಯೂನಿಯನ್ ಎಂದು ರೆಕಗ್ನೈಸ್ ಮಾಡಬೇಕಾದರೆ ಸೀಕ್ರೆಟ್ ಬ್ಯಾಲೇಟ್ ಇದೆ. ಅದರ ಮೂಲಕ ರೆಕಗ್ನೈಸ್ ಮಾಡುವುದು; ಹಾಗೆ ಇರತಕ್ಕಂಥ ಸಂದರ್ಭದಲ್ಲಿ ನೀವು ರೆಕಗ್ನೈಸ್ಡ್ ಯೂನಿಯನ್ ಎಂದು ಬರೆಯದೆ ಬರೀ ವರ್ಕರ್ಸ್ ಎಂದು ಬರೆದರೆ ನೀವು ಟ್ರೇಡ್ ಯೂನಿಯನ್ಸ್ ಎಂದು ಬರೆಯುತ್ತೀರಿ. ಅದು ಸ್ಟ್ಯಾಂಡಿಂಗ್ ಆರ್ಡರ್ ಹೇಗೆ ಆಗುತ್ತದೆ?

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, ಈ ರೀತಿ ಕಾನೂನುಗಳನ್ನು ತರುತ್ತಿರಲ್ಲಾ, ಇದರಲ್ಲಿ ಯಾವರೀತಿ ದುರುಪಯೋಗವಾಗಿಗೆ ಅಂತ ಒಂದು ಉದಾಹರಣೆ ಕೊಡುತ್ತೇನೆ. ಕಳೆದ ಅಧಿವೇಶನದಲ್ಲಿ ನಾನು ಪ್ರಶ್ನೆ ಕೇಳಿದ್ದೆ ಯಶವಂತಪುರದಲ್ಲಿ ಲೀಲಾ ಫ್ಯಾಶನ್ ಅಂತ ಇದೆ, ಸುಮಾರು ಒಂದೂವರೆ ಎರಡು ಸಾವಿರ ಹೆಂಗಸರು ಅಲ್ಲಿ ಕೆಲಸ ಮಾಡುತ್ತಿದ್ದಾರೆ. ನನ್ನ ಕ್ಷೇತ್ರದವರೇ ಇನ್ನೂರು ಮಂದಿ ಇದ್ದಾರೆ. 800, 1000 ರೂಪಾಯಿಗೆ ಬೆಳಿಗ್ಗೆ 8 ರಿಂದ ರಾತ್ರಿ 830 ರವರೆಗೆ ಅವರಿಂದ ದುಡಿಸಿಕೊಳ್ಳುತ್ತಿದ್ದಾರೆ. ಇದ್ದಕ್ಕಿದ್ದ ಹಾಗೆ ಈ ಇಂಡಸ್ಟ್ರಿಯನ್ನು ಯಾವುದೋ ಕಾರ್ಮಿಕರ ಯೂನಿಯನ್ ಒಪ್ಪಿಗೆ ಕೊಟ್ಟರು ಅಂತ ಹೇಳಿ ಒಂದು ದಿವಸ ಬಂದ್ ಮಾಡಿದರು. ಇದೇ ಮ್ಯಾನೇಜ್ ಮೆಂಟ್‌ನವರು ಇನ್ನೊಂದು ಲೀಲಾ ಸ್ಟ್ಯಾಪಿಸ್ ಅಂತ ಪಕ್ಕದ ಕಟ್ಟಡದಲ್ಲಿ ಪ್ರಾರಂಭ ಮಾಡಿದ್ದಾರೆ. ಅದೇ ಕಾರ್ಮಿಕರು, ಅದೇ ಮ್ಯಾನೇಜ್‌ಮೆಂಟ್, ಇದನ್ನು ಕ್ಲೋಸ್ ಮಾಡಿ ಅದನ್ನು ಪ್ರಾರಂಭ ಮಾಡಿದರು, ಹೆಸರೊಂದು ಬದಲಾವಣೆ, ಮಾನ್ಯ ಸಚಿವರೇ, ನಿಮ್ಮ ಕಾರ್ಮಿಕ ಇಲಾಖೆ ಇದೆಯಲ್ಲಾ ಅದಕ್ಕೆ ಸರ್ಕಾರ ಅಲ್ಲ ಸಂಬಳ ಕೊಡುವುದು; ಯಾವ ಇಂಡಸ್ಟ್ರಿ ಮಾಲೀಕ ಇದ್ದಾನೆ ಅವನ

ಎಂಜಲಿನಲ್ಲಿ ಅವರು ಬದುಕುತ್ತಿದ್ದಾರೆ. ಇವತ್ತು ಹೇಳುತ್ತೇನೆ: ನಿನ್ನೆಯಿಂದ 300 ಹೆಣ್ಣುಮಕ್ಕಳು ಧರಣಿ ಕುಳಿತುಕೊಂಡಿದ್ದಾರೆ. ಕ್ಲೋಸಾಗಿದ್ದ ಇಂಡಸ್ಟ್ರಿ ಕಾರ್ಮಿಕರ ಹತ್ತಿರ ವಸೂಲು ಮಾಡಿದ್ದ ಪಿಎಫ್ ಪ್ರಾವಿಡೆಂಟ್ ಫಂಡ್ ಇಲಾಖೆಗೆ ಕಟ್ಟಲಿಲ್ಲ, ಮ್ಯಾನೇಜ್‌ಮೆಂಟ್ ಶೇರನ್ನೂ ಕಟ್ಟಿಲ್ಲ, ಸುಮಾರು ಒಂದೂವರೆ ಕೋಟಿ ರೂ. ಗಿಂತ ಹೆಚ್ಚು ಆ ಕಾರ್ಮಿಕರಿಗೆ ನಾಮ ಹಾಕಿದ್ದಾರೆ ನಿನ್ನೆ ಸ್ಟ್ರೈಕ್ ಕೂತುಕೊಂಡರೆ ನೋಟಿಸ್ ಬೋರ್ಡ್ ಹಾಕಿದ್ದಾರಂತೆ ನಿಮ್ಮನ್ನು ರಜ ಅಂತ ಹೇಳಿ ಸ್ಯಾಲರಿ ತಡೆಹಿಡಿಯುತ್ತೇವೆ ಅಂತ. ಅಂದರೆ ಕಾರ್ಮಿಕರಿಗೆ ಅವರ ಪಿಎಫ್ ಬಗ್ಗೆ ಕೇಳಲೂ ಸ್ವಾತಂತ್ರ್ಯವಿಲ್ಲ; ನಾನು ಕೇಳಿದರೆ ನೀವೇ ಉತ್ತರ ಕೊಟ್ಟಿದ್ದೀರಿ ಎನೂ ತೊಂದರೆಯಾಗಿಲ್ಲ ಅವರವರಲ್ಲೇ ಒಪ್ಪಂದ ಮಾಡಿಕೊಂಡು ಕ್ಲೋಸ್ ಮಾಡಿದ್ದಾರೆ, ಎಲ್ಲರೂ ಕೂಡ ರಾಜೀನಾಮೆ ಕೊಟ್ಟಿದ್ದಾರೆ ನೋಡಿ ಅಂತ ಹೇಳುತ್ತಾರೆ. ಬಲವಂತವಾಗಿ ನಿಮ್ಮ ಗಾರ್ಮೆಂಟ್ ಇಂಡಸ್ಟ್ರಿಗಳಲ್ಲಿ ಯಾವ ಯೂನಿಯನ್ನೂ ತಲೆ ಎತ್ತಲಿಕ್ಕೆ ಅವರು ಬಿಡುವುದಿಲ್ಲ, ಮ್ಯಾನೇಜ್‌ಮೆಂಟ್ ಪರವಾಗಿ ಹತ್ತು ಜನರ ಒಂದು ಯೂನಿಯನ್ ಮಾಡಿಕೊಂಡು ಅದನ್ನು ರೆಕಗ್ನೈಸ್ ಯೂನಿಯನ್ ಅಂತ ಹೇಳಿಕೊಂಡು ಸಿಗ್ನೇಚರ್ ಹಾಕಿಸಿ ಕೊಂಡಿದ್ದಾರೆ. ಇದೇ ಯಶವಂತಪುರಕ್ಕೆ ನೀವು ಹೋಗಬೇಕು, ನಿಮ್ಮ ಅಧಿಕಾರಿಗಳಿಗೆ ನಿಮ್ಮ ಇಲಾಖೆ ಸಂಬಳ ಕೊಡುತ್ತಿದೆಯೋ ಅಥವಾ ನಿಮ್ಮ ಇಲಾಖೆ ಸತ್ತಿದೆಯೋ ಬದುಕಿದೆಯೋ ಅಂತ ನೋಡಬೇಕು. ನೀವು ಕಾನೂನು ತರುವ ಮೊದಲು ಇದು ಕಾರ್ಮಿಕರಿಗೆ ಮಾರಕವಾಗಿರಬಾರದು. ಶೋಷಣೆ ಮಾಡಲು ಅವಕಾಶವಾಗುವಂತಹ ಕಾನೂನುಗಳು ದಯವಿಟ್ಟ ಆಗಬಾರದು. ನಿಮಗೆಂದು ಒಳ್ಳೆಯ ಉದ್ದೇಶವಿದೆ ಆದರೆ ನಿಮ್ಮ ಕೈಕೆಳಗಿನ ಅಧಿಕಾರಿಗಳು ಪಾಪಿಗಳಿದ್ದಾರೆ. ಅವರು ಮಾಲೀಕರ ಪರವಾಗಿದ್ದಾರೆ. ಅವರು ಕಾರ್ಮಿಕರ ಪರವಾಗಿಲ್ಲ ಬೆಳಿಗ್ಗೆ ಎಳೂವರೆಗೆ ಕೆಲಸ ಶುರುವಾಗುತ್ತದೆ ರಾತ್ರಿ 9 ಗಂಟೆವರೆಗೂ ದುಡಿಸಿಕೊಂಡು ಅವರ ಕೈಬಿಡುತ್ತಿದ್ದಾರೆ. ಆ ಹೆಣ್ಣುಮಕ್ಕಳ ಮೇಲೆ ಹಲ್ಲೆ ಅತ್ಯಾಚಾರಗಳಾಗುತ್ತಿವೆ, ಕೇಳುವವರಿಲ್ಲ, ಎಕೆಂದರೆ ಹಡಗು ಬಯತ್ತವೆ, ಮಾಲು ಕಳಿಸಬೇಕು ಅದಕ್ಕಾಗಿ ಉತ್ಪಾದನೆ ಜಾಸ್ತಿ ಮಾಡಬೇಕು ಅಂತ ಹೇಳಿ ಬಲಾತ್ಕಾರವಾಗಿ ಒ. ಟಿ., ಒ. ಟಿ. ಗೆ ಬರದಿದ್ದರೆ ನಿನಗೆ ಸಂಬಳ ಕೊಡುವುದಿಲ್ಲ ಅಂತ, ಈ ರೀತಿ ಹೆಣ್ಣುಮಕ್ಕಳ ಮೇಲೆ ದೌರ್ಜನ್ಯ ನಡೆಯುತ್ತಿದ್ದರೂ ಮಾಲೀಕರ ಪರವಾಗಿ ನಿಮ್ಮ ಅಧಿಕಾರಿಗಳು ಇಂತಹ ಬಿಲ್‌ಗಳನ್ನು ಇಲ್ಲಿ ಮಂಡಿಸಲು ಅವಕಾಶ ಮಾಡಿಕೊಡುತ್ತಿದ್ದಾರೆ. ದಯವಿಟ್ಟು ಪುನರ್‌ಪರಿಶೀಲನೆ ಮಾಡಬೇಕು ಅಂತ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ತಮ್ಮ ಉದ್ದೇಶ ಏನು ಸಾರ್? ಈಗಿರುವಂತೆ ಈ ಅಧಿನಿಯಮ ಅನ್ವಯವಾಗತಕ್ಕ ನಿಯೋಜಕರು ಕರಡು ಸ್ಥಾಯಿ ಆದೇಶಗಳನ್ನು ತಯಾರಿಸತಕ್ಕದ್ದು ಮತ್ತು ಅಧಿನಿಯಮ ಅನ್ವಯವಾಗುವ ದಿನಾಂಕದಿಂದ 5 ತಿಂಗಳೊಳಗಾಗಿ ಪ್ರಮಾಣೀಕರಿಸುವ ಅಧಿಕಾರಿಗಳಿಗೆ ಅದನ್ನು ಸಲ್ಲಿಸತಕ್ಕದ್ದು within five months ಅದನ್ನು ರಿಜಿಸ್ಟರ್ ಮಾಡಿಸಿಕೊಳ್ಳಬೇಕು, Standing orders ಅಂತ ಹೇಳಿದ್ದೀರಿ. ಆದರೆ ವಾಸ್ತವ ಕಾರ್ಯ ನಿರ್ವಹಣೆಯಲ್ಲಿ ಪಡೆದ ಅನುಭವ ಹಿನ್ನೆಲೆಯಲ್ಲಿ ಹೇಳುವುದಾದರೆ ಪ್ರಮಾಣೀಕರಿಸುವ ಪ್ರಕ್ರಿಯೆಗೆ ಬಹಳ ಕಾಲ ತೆಗೆದುಕೊಳ್ಳುತ್ತದೆ. ಮಾನ್ಯ ಸಚಿವರೇ, 5 ತಿಂಗಳು ಯಾಕೆ ಬೇಕು, ಮೂರು ತಿಂಗಳಿಗೆ ಇಳಿಸಿ, ನಿಮ್ಮ ಅಧಿಕಾರಿಗಳಿಗೆ

ಕೇಳಿ ಏತಕ್ಕೆ 5 ತಿಂಗಳು ತೆಗೆದುಕೊಳ್ಳತ್ತಿದ್ದೀರಿ, ಅದಕ್ಕೆ ಅಂತ ಒಂದು ಮಾಡಲ್ Standing orders ಇರುತ್ತದೆ. ಒಂದು ರೂಲ್ಸ್ ಇರುತ್ತದೆ ನಿಮ್ಮ Industrial Disputes/Act ಕೆಳಗಡೆ. 5 ತಿಂಗಳಿಗೂ ಅವರು ಮಾಡಲಿಲ್ಲ ಅಂದರೆ it is something else. Corruption ಗೋ ಮತ್ತೊಂದಕ್ಕೋ file pending ಇದೆ ಅಂತರ್ಥ ಹಿಂದೆ ಶಾಸನಕ್ಕೆ ಒಂದು ತಿದ್ದುಪಡಿ ತಾವು ತಂದಿರಿ: ಟೈಮನ್ನು ಕಡಿಮೆ ಮಾಡೋಕೆ. ಇದನ್ನೂ ಹಾಗೇ ಮಾಡಿ, ಮೂರು ತಿಂಗಳಿಗೆ ಇಳಿಸಿ, We welcome this. Standing orders ಅನ್ನು ನಿಮಗೆ ಅವರು ಸಬ್‌ಮಿಟ್ ಮಾಡಿದ ಮೂರು ತಿಂಗಳಿಗೇ ಇಳಿಸಿ ಅನ್ನಿ welfare activity ನಲ್ಲಿ labour ಗೆ ಬೆನಿಫಿಟ್ ಇದೆಯಾ ಇಲ್ಲವಾ ನೋಡಬೇಕು. Labour interest ಎನಾಗಿದೆಯೋ ನೋಡಬೇಕು. ಮಾಲೀಕರು ಅವರು ಒಂದಾಗಿ ಮಾಡಿಕೊಂಡರೆ ಅವರು ತಂದು ತೋರಿಸುವುದೇ ಬೇಡ ಅಂತ ಸರ್ಕಾರ ಹೇಳಿಬಿಟ್ಟರೆ ಗತಿಯೇನು? ನೀವು ಶ್ರೀಮಂತರೇ ಇರಬಹುದು ಮಾಲೀಕರ ಪರವೇ ಇರಬಹುದು ಅದರೆ ನಿಮ್ಮ ಹತ್ತಿರ ಇರುವುದು ಕಾರ್ಮಿಕ ಖಾತೆ. ಅವರ ಇಂಟರೆಸ್ಟ್‌ನಲ್ಲಿ ನೀವು ಕೆಲಸ ಮಾಡಬೇಕು. outside he may be an industrialist. ಯಾರ ಪರ ಆದರೂ ಇರಿ, ನೀವು ಕಾರ್ಮಿಕ ಸಚಿವರು ಉದ್ದಿಮೆದಾರರಿಗೆ ಸಹಾಯವಾಗುವಂತಹ ತಿದ್ದುಪಡಿ ತಂದರೆ ಹೇಗೆ? ಒಂದು ವೇಳೆ ಮಾನ್ಯ ಸಿಂಧ್ಯಾ ರವರು ಹೇಳಿದರೆ ನಾವು ಒಪ್ಪಿಕೊಳ್ಳುತ್ತೇವೆ ತೊಂದರೆಯಾಗುತ್ತದೆ, ಹೂಡಿಕೆದಾರರು ಬರುತ್ತಾ ಇಲ್ಲ labour laws ನಲ್ಲಿ ಆಗಿರುವ ನ್ಯೂನತೆಗಳಿಂದ ಡಿಸ್‌ಪ್ಯೂಟ್ ಜಾಸ್ತಿ ಆಗುವುದನ್ನು ಕಡಿಮೆ ಮಾಡಿ ಅಂತ ಕೇಳುತ್ತಿದ್ದಾರೆ ಅದೆಲ್ಲಾ ಅವರು ಪ್ರಪೋಸ್ ಮಾಡಿದರೆ ಒಂದು ತರಹ, you have to fight for the welfare of the labour. ನೀವೆ ಮಾಲೀಕರ ಪರವಾಗಿ ಹೂಡಿಕೆದಾರರ ಕೈಗಾರಿಕೆಗಾರರ ಪರವಾಗಿ ಬಿಲ್ ತಂದರೆ ಹೇಗೆ? ಇದು ಸಾಧ್ಯವಿಲ್ಲ, ತಾವು ಹಿಂದಕ್ಕೆ ತೆಗೆದುಕೊಳ್ಳಬೇಕು. ಈಗೇನು Standing orders ಅನ್ನು ಸರ್ಕಾರ ಅಪ್ರೂವ್ ಮಾಡಬೇಕು ಅಂತ ಶಾಸನವಿದೆ, ಆ ಟೈಂ ಲಿಮಿಟನ್ನು ಬೇಕಾದರೆ ಕಡಿಮೆ ಮಾಡಿ. 3 ತಿಂಗಳೊಳಗೆ ಅಪ್ರೂವಲ್ ಮಾಡಬೇಕು ಅನ್ನಿ, ಅದಕ್ಕೆ you insist your officers. ಯಾಕೆ ಡಿಲೇ ಮಾಡುತ್ತಿದ್ದೀರಿ ಅಂತ ಕ್ರಮ ಕೈಗೊಳ್ಳಿ, ಬದಲಿಗೆ ಅಧಿಕಾರವನ್ನೇ ಕಿತ್ತುಬಿಟ್ಟು ಅವರವರಿಗೇ ಬಿಟ್ಟುಬಿಡುವುದಾ ?

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಉಪಾಧ್ಯಕ್ಷರೆ, ಜೊತೆಗೆ ಮಾನ್ಯ ಮಂತ್ರಿಗಳು ಇಲ್ಲಿ ಕೊಟ್ಟಿದ್ದಾರೆ. " to provide provisions for drafting standing orders by the emplyer and discuss with the trade union ….. " Registered or recognized trade union ಕೊಟ್ಟಿಲ್ಲವೇ ? ಅಂದರೆ ಎಲ್ಲಾರೂ ಟ್ರೇಡ್ ಯೂನಿಯನ್ನೇ? Whether registered or recognized trade union ಅದನ್ನು ಕೊಟ್ಟಿಲ್ಲ, ಜೊತೆಗೆ, Cartifying officer ಎಂಪ್ಲಾಯಿ ಕಡೆ ಇರುತ್ತಾನಾ? ಮ್ಯಾನೇಜ್‌ಮೆಂಟ್ ಕಡೆ ಇರುತ್ತಾನೆ who is certifying them ಎಂಪ್ಲಾಯಿಗಳು ಸರ್ಟಿಫೈಡ್ ಮಾಡುವುದಕ್ಕೆ ಹಾಗುವುದಿಲ್ಲ in favour of management. They will adopt pick and choose policy. ಹತ್ತು ಜನ ಗುಲಾಮರನ್ನು ಇಟ್ಟುಕೊಂಡು ಈ

ತರಹ ನಾವು ಮಾಡುತ್ತೇವೆ, ನಿಮ್ಮದು ಸರಿಯಿಲ್ಲ ಹಾಗೆ ಮಾಡಿದರೆ it affects only employees. Just think over it. ಮರುಪರಿಶೀಲನೆ ಮಾಡಿ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಹೀಗೇ ತಂದರೆ ನಾವು ಅದನ್ನು ವಿರೋಧ ಮಾಡುತ್ತೇವೆ. ಯಾಕೆ ಅಂತ ಹೇಳಿದರೆ ಸಂಪೂರ್ಣವಾಗಿ ಇದು ಕಾರ್ಮಿಕರಿಗೆ ವಿರೋಧ ಇದೆ. Industrial disputes Act ಗೆ contradiction ಆಗುತ್ತದೆ. ಏಕೆಂದರೆ Industrial Dispute Act ಏನು ಹೇಳುತ್ತದೆ. ಬಹಳ ಕ್ಲಿಯರಾಗಿ, "the management authority has to negotiate only with the recongnised union which has been recognized through secret ballot" ನೀವು ಅಂತ ಬರೆದಿದ್ದೀರಿ If there is no trade union recognized majority workers ಅದೂ ಇಲ್ಲ, ಆದ್ದರಿಂದ ಖಂಡಿತ ಕಾರ್ಮಿಕ ವಿರೋಧಿಯಾದ ಬಿಲ್ ತಂದಿದ್ದೀರಿ ದಯವಿಟ್ಟು ಇದನ್ನು ವಾಪಸ್ ಪಡೆಯಿರಿ ಅಥವಾ ತಿದ್ದುಪಡಿ ಮಾಡಿ. ಯಾಕೆಂದರೆ 5 ತಿಂಗಳು ಕೊಟ್ಟುಬಿಟ್ಟು ಅದರಿಂದ ಯಾರಿಗೆ ಅನುಕೂಲ ನೀವೇ ಹೇಳಿ? 5 ತಿಂಗಳು ಏಕೆ ಬೇಕು? You are giving yourself room for corruption and malpractice.

ಶ್ರೀ ತನ್ವೀರ್ ಸೇಠ್ (ಕಾರ್ಮಿಕ ಹಾಗೂ ಹಜ್ ರಾಜ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಬಹುಶಃ ಈ ತಿದ್ದುಪಡಿಯನ್ನು ಸರಿಯಾದ ರೀತಿಯಲ್ಲಿ ಗೌರವಾನ್ವಿತ ಸದಸ್ಯರುಗಳು ಭಾವಿಸಿಕೊಂಡಿಲ್ಲ ಅಂತ ನಾನಾದರೂ ಭಾವಿಸುತ್ತೇನೆ. ಈಗ ಎತ್ತಿರುವ ಕೆಲವು ವಿಚಾರಗಳಿಗೆ ಸ್ಪಷ್ಟವಾಗಿ ನಾನು ವಿವರವಾದ ಹೇಳಿಕೆ ಕೊಡಬೇಕಾಗುತ್ತದೆ. ಈವರೆಗೂ ಇರುವ ಒಂದು ಪದ್ಧತಿ ಮಾಲೀಕರು ಸ್ಥಾಯಿ ಆದೇಶದ ಕರಡನ್ನು ತಯಾರಿಸಿ ಇಲಾಖೆಗೆ 5 ತಿಂಗಳ ಒಳಗೆ ತಂದುಕೊಡುವ ಪದ್ಧತಿ ಇದೆ, ನಮ್ಮ ಇಲಾಖೆಗೆ ಬಂದ ಮೇಲೆ ನಾವು ಅದನ್ನು ಒಪ್ಪಂದ ಮಾಡಿ ವಾಪಸ್ ಕೊಟ್ಟಂತಹ ಸಂದರ್ಭದಲ್ಲಿ ತದನಂತರ ಕಾರ್ಮಿಕಪ್ರತಿನಿಧಿಗಳ ಜೊತೆ ಚರ್ಚಿಸಲು ಅವಕಾಶವಿತ್ತು ಆವಾಗ ಕಾರ್ಮಿಕರ ಹಿತ ಕಾಪಾಡುವುದು ಆಗುತ್ತಿರಲಿಲ್ಲ. ಆ ಕಾರಣಕ್ಕಾಗಿ ಒಂದು ಪದ trade union ಅಥವಾ workers' representative ಅಂತ ಬರೆದಿದ್ದೇವೆ. Regd. Trade union ಯಾಕೆ ಬರೆದಿಲ್ಲ ಅಂದರೆ ಮುಂದಿನ ದಿನಗಳಲ್ಲಿ Trade Union Act 1956 ಗೆ ಒಂದು ಸ್ಪಷ್ಟವಾದ modification ತರಬೇಕು ಅಂತ ಇದ್ದೇನೆ. ಪ್ರತಿಯೊಂದು ಕಾರ್ಖಾನೆಯಲ್ಲಿ registered Trade Union by way of referendum ಇರಬೇಕು ಅನ್ನುವುದೇ ನಮ್ಮ ಆಸೆ ಆದರೆ ಇವತ್ತು ನಮ್ಮ ಮುಂದಿರುವ ಕಾರ್ಮಿಕ ಸಂಘಟನೆಗಳು ಅವರ ಜೊತೆ ನಾವು ಸಮಾಲೋಚನೆ ನಡೆಸಿದ್ದೇವೆ ಅವರ ಒಪ್ಪಿಗೆ ಪಡದೇ ಈ ತಿದ್ದುಪಡಿಗಳನ್ನು ನಾವು ತಂದಿರುವುದು. 5 ತಿಂಗಳು ಅಂತ ಏನಿದೆ ಅದರೊಳಗೆ ಅವರು Model Standing orders ಅನ್ನು ತಯಾರಿಸಿ ಇಲಾಖೆಗೆ ಕಳುಹಿಸಿಕೊಟ್ಟು ಇಲಾಖೆ ಅದನ್ನು ಅನುಮೋದನೆ ಮಾಡಿದ ಮೇಲೆ ಕಾರ್ಮಿಕರ ಜೊತೆ ಚರ್ಚೆ ಮಾಡುವಂತಹ ಪದ್ಧತಿ ಏನಿತ್ತು, ಅದಕ್ಕೆ ಕಡಿವಾಣ ಹಾಕಿ ನೇರವಾಗಿ ಕಾರ್ಮಿಕರ ಜೊತೆ ಸಮಾಲೋಚನೆ ನಡೆಸಿ ಅನಂತರ ನಮ್ಮ ಹತ್ತಿರ ತರುವುದು ನಾವು ಮಾಡಬೇಕಾಗುತ್ತದೆ. ಆದರೆ ನಮ್ಮ ಈ ಮಾಡಲ್ ಸ್ಟ್ಯಾಂಡಿಂಗ್ ಆರ್ಡರ್‌ನಲ್ಲಿ ಎಲ್ಲಿ ವಿವಾದ ಸೃಷ್ಟಿಯಾಗುತ್ತದೆ ಆ ಎಲ್ಲಾ ಹಗ್ಗಗಳನ್ನು ನಾನು ನನ್ನ ಇಲಾಖೆ

ಕೈಯಲ್ಲೇ ಇಟ್ಟುಕೊಂಡಿದ್ದೇನೆ ಅಂತ ಹೇಳುತ್ತೇನೆ ಈವರೆಗಿನ ನಮ್ಮ ಅನುಭವ ಏನು ಮಾಲೀಕರು 5 ತಿಂಗಳಲ್ಲಿ ತಯಾರಿಸಿ ಕಳುಹಿಸಿದ ಸಂದರ್ಭದಲ್ಲಿ ಯಾರದೋ ನಾಲ್ಕು ಜನ ರುಜು ಮಾಡಿ ನಮ್ಮ ಹತ್ತಿರ ಕಳುಹಿಸುತ್ತಾರೆ. ಇಲ್ಲಿಂದ ನಾವು ಕೆಲವೊಂದು ತಿದ್ದುಪಡಿ ಕಾರ್ಮಿಕರ ಪರ ಇರವಂಥವು ಅಥವಾ ಉತ್ತಮ ಬಾಂಧವ್ಯ ಮೂಡಿಸುವಂತಹ ನಿಟ್ಟಿನಲ್ಲಿ ನಾವೇನು ಮಾಡಿಕಳುಹಿಸುತ್ತೇವೆ. ಮತ್ತೆ ಅಲ್ಲಿ ತಕರಾರು ಆಗಿ ಕಾರ್ಖಾನೆಯಲ್ಲಿ ಕಾರ್ಮಿಕರಿಗೆ ಸಿಕ್ಕ ಬೇಕಾದ ಹಕ್ಕೇನಿದೆ, ಅದಕ್ಕೆ ಮುಟ್ಟುಗೋಲು ಮಾಡುವ ವ್ಯವಸ್ಥೆ ನಾವು ಎನು ನೋಡಿದ್ದೇವೆ. ಆ ಕಾರಣಕ್ಕಾಗಿಯೇ ಎಲ್ಲಿಯತನಕ ಕಾರ್ಮಿಕ ಸಂಘಟನೆಗಳು ಇದಕ್ಕೆ ಒಪ್ಪಿಗೆಯನ್ನು ಕೊಡುವುದಿಲ್ಲ, ನಾವು ಆ ಸ್ಥಾಯಿ ಆದೇಶಕ್ಕೆ ಅನುಮತಿಯನ್ನು ಕೊಡುವುದಿಲ್ಲ. ಇಲ್ಲಿ ಒಂದು ಬಾಂಧವ್ಯವನ್ನು ಮೂಡಿಸುವ ಪ್ರಯತ್ನವನ್ನು ಮಾಡುವುದಕ್ಕೆ, ಅದರ ಜೊತೆಗೆ ಕಾರ್ಮಿಕ ಸಂಘಟನೆಗಳು ಕಡ್ಡಾಯವಾಗಿ ಈ ಒಂದು ಕಾರ್ಖಾನೆಯಲ್ಲಿ

(ಗೊಂದಲ)

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ನೀವೇನು ಹೇಳುತ್ತಿದ್ದೀರಿ. ನೀವು ಕಾರ್ಮಿಕ ಸಂಘಟನೆಗಳು ಟ್ರೇಡ್ ಯೂನಿಯನ್ ಎಂದು ಬರೆದಿದ್ದೀರಿ.

ಶ್ರೀ ತನ್ವೀರ್ ಸೇಠ್ : ಹೌದು.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ನಾನು ಹೇಳುತ್ತಿರತಕ್ಕಂಥದ್ದು Registered recognized Union ಬರಬೇಕು. ಅಥವಾ ಮೆಜಾರಿಟಿ ವರ್ಕರ್ಸ್ ಎಂದಾದರೂ ಕೂಡ ಬರಬೇಕು. ಅದು ಇಲ್ಲವೆಂದು ಹೇಳಿದರೆ it is contradictory to the Industrial dispute Act which says; Through secret ballet a recognized union has to be get elected.

ಅಂತ ಎನು ಇದೆ, ಅದು ವಯಲೇಷನ್ ಆಗುತ್ತೆ.

ಶ್ರೀ ತನ್ವೀರ್ ಸೇಠ್ : ಆ ಕಾರಣಕ್ಕಾಗಿಯೇ There shall be a Union in every . . . .

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ನಾನು ಇನ್ನೂ ಪೂರ್ತಿ ಮಾಡಿಲ್ಲ. 26ನೇ ಆಕ್ಟ್‌ಗೆ ಮುಂದೆ ನಾವೇನು ಅಮೆಂಡ್‌ಮೆಂಟ್‌ನ್ನು ತರುತ್ತೇವೆಂದು ನೀವೇನು ಹೇಳುತ್ತಿದ್ದೀರಿ, ಆ ಅಮೆಂಡ್‌ಮೆಂಟ್ ಈಗಾಗಲೇ Every industry must have single union ಎಂದು ಅಮೆಂಡ್‌ಮೆಂಟ್ ಆಗಿದೆ. That should be elected through secret ballot ಎಂದು ಆಗಿದೆ. ನೀವು ಅದನ್ನು ತರುವವರೆಗೂ ಇದು ಇರಲಿ ಎಂದು ಹೇಳಿದರೆ ಅದನ್ನು ಮೊದಲು ತನ್ನಿ. ಆಮೇಲೆ ಇದನ್ನು ತನ್ನಿ ಹಾಗಾದರೆ. ಅದಕ್ಕೂ ಇದಕ್ಕೂ ಸಂಬಂಧವೇ ಇಲ್ಲ. 26ನೇ ಆಕ್ಟ್ ಅಮೆಂಡ್‌ಮೆಂಟ್‌ಗೆ ಅದಕ್ಕೂ ಇದಕ್ಕೂ ಸಂಬಂಧವೇ ಇಲ್ಲ.

ಶ್ರೀ ಜೆ. ಸಿ. ಮಾಧುಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ಸ್ಟ್ಯಾಂಡಿಂಗ್ ಆರ್ಡರ್ಸ್ ಅಪ್ರೂವಲ್ ಏಕೆ ಆಗಬೇಕೆಂದರೆ ಅಪ್ರೂವ್ ಮಾಡುವ ಅಥಾರಿಟಿಗೆ ಆಕ್ಟ್ ಪ್ರಾವಿಷನ್ಸ್, ರೂಲ್ಸ್ ಪ್ರಾವಿಷನ್ಸ್ ಇಟ್ಟುಕೊಂಡು will they comply with the provisions of the Law ಎಂದು ನೋಡಿ ಅಪ್ರೂವಲ್‌ನ್ನು ಕೊಡುತ್ತಿದ್ದರು. ಈಗ ತಾವು ತಂದಿರುವುದರಿಂದ ದುರಂತ ಎನಾಗಿದೆ,

ಈಗ ಸನ್ಮಾನ್ಯ ದೇಶಪಾಂಡೆಯವರ ಇಲಾಖೆ, ಒಂದು ಮಾಡಲ್ ಬೈಲಾಸ್ ಇರುತ್ತೆ. ಕೋಆಪರೇಟಿವ್ ಆಕ್ಟ್ ಇರುತ್ತೆ. ನಾನು ಸೊಸೈಟಿ ರಿಜಿಸ್ಟರ್ ಮಾಡಿ ಬೇಲ್ ಮಾಡಿಕೊಂಡು It has to be approved by the Assistant Registrar or Joint Registrer whoever it may be. ಎತಕ್ಕೇ? Under the context of Law ಇರಬೇಕು ಅದು. ನಿಮ್ಮ ಮೆಯಿನ್ ಪ್ರಾವಿಷನ್ ಆಫ್ ದಿ ಆಕ್ಟ್ ಕೆಳಗೆ ಅವನು ಸ್ಟ್ಯಾಂಡಿಂಗ್ ರೂಲ್ಸ್ ಅನ್ನು ಮಾಡಿದ್ದಾನಾ. ಅದರಲ್ಲಿ ಡಿಸ್‌ಪ್ಯೂಟ್ ಆಕ್ಟ್ ಅನ್ನು ಕವರ್ ಮಾಡಿದ್ದಾನಾ? ವೆಲಫೇರ್ ಆಕ್ಟಿವಿಟೀಸನ್ನು ನೋಡಿದ್ದಾನಾ? ಇದನ್ನೆಲ್ಲಾ ನೋಡಿ ಒಂದು ಸಂಸ್ಥೆಗೆ ಒಂದು ಕಾರ್ಖಾನೆಗೆ, ಒಂದು ಆರ್ಗನೈಸೇಷನ್‌ಗೆ ಸ್ಟ್ಯಾಂಡಿಂಗ್ ಆರ್ಡರ್ಸ್‌ನ್ನು ಅವನು ಫ್ರೇಮ್ ಮಾಡಬೇಕು. ಅದನ್ನು ತಂದು ನಿಮ್ಮ ಮುಂದೆ ಇಟ್ಟಾಗ ನಿಮ್ಮ ಅಧಿಕಾರಿಗಳು within five months ಅದನ್ನು ಅಪ್ರೂವ್ ಮಾಡಿ ಅವನಿಗೆ ಕೊಡಬೇಕು. Dispute ಆದರೆ ಅಪೀಲ್ ತೆಗೆದುಕೊಳ್ಳಬೇಕು. ತಾವೇನು ಹೇಳುವುದಕ್ಕೆ ಹೊರಟಿದ್ದೀರಿ, ಆ ಸಂಸ್ಥೆಯ ಕಂಪನಿಯವನು ಯಾವುದೋ ಒಂದು ನೌಕರನ ಜೊತೆಗೆ ಕುಳಿತುಕೊಂಡು ಚರ್ಚೆ ಮಾಡಿಬಿಟ್ಟು ಅಪ್ರೂವಲ್ ಅನ್ನು ತೆಗೆದುಕೊಂಡುಬಿಟ್ಟರೆ ಅವರಿಬ್ಬರೂ ಒಪ್ಪಿಕೊಂಡುಬಿಟ್ಟರೆ It need not be registered or approved ಎನ್ನುವ ಪದವನ್ನು ಸೇರಿಸಿದ್ದೀರಿ. ಅದು ಅಪ್ರೂವಲ್‌ಗೆ ಬರಬೇಕಾದ ಅಗತ್ಯ ಇಲ್ಲವೆಂದು. By that, ಫ್ಲಡ್‌ಗೇಟ್ ಅನ್ನು ಒಪನ್ ಮಾಡುತ್ತಿದ್ದೀರಿ. ಸರ್ಕಾರ ಅಥವಾ ನಿಮ್ಮ ಇಲಾಖೆಗೆ ಎನು ಹಿಡಿತ ಇತ್ತು, ಅದನ್ನು ಕಳಚಿ ಕೈಬಿಟ್ಟುಬಿಡುತ್ತಿದ್ದೀರಿ. ನಾಳೆ ಅದು ಆಕ್ಟ್ ಆದರೆ, ಕಾನೂನು ಆದರೆ ಯಾರೂ ಡಿಸ್‌ಪ್ಯೂಟ್ ಮಾಡುವುದಕ್ಕಾಗುವುದಿಲ್ಲ. There will be provision to the management. ಐದು ಜನರನ್ನೋ, ಹತ್ತು ಜನರನ್ನೋ ವರ್ಕರ್ಸ್‌ನ್ನು ಅವನೇ ಸಂಘಟನೆ ಮಾಡಿ ಅವರ ಹತ್ತಿರ ನೆಗೋಷಿಯೇಟ್ ಮಾಡಿದ್ದೇನೆ, ಅವರು ಒಪ್ಪಿಕೊಂಡು ಈ ಸ್ಟ್ಯಾಂಡಿಂಗ್ ಆರ್ಡರ್ಸ್‌ನ್ನು ಮಾಡಿದ್ದೇನೆ. ಅಂತ, ಆತ ಹೇಳಿದರೆ other party cannot approach the authority. ಬೇರೆ ಪಾರ್ಟಿ ಬಂದು ನಿಮ್ಮನ್ನು ಅಪ್ರೋಚ್ ಮಾಡುವುದಕ್ಕಾಗುವುದಿಲ್ಲ. ಸ್ಟ್ಯಾಂಡಿಂಗ್ ಆರ್ಡರ್ಸ್ ಮಾಡಬೇಕಾದರೆ ಅನ್ಯಾಯವಾಗಿದೆ, ನಮ್ಮ ಯೋಗಕ್ಷೇಮವನ್ನು ಕೇಳಿಲ್ಲವೆಂದು ಅಪ್ರೋಚ್ ಮಾಡುವುದಕ್ಕಾಗದಂಥ ಸ್ಥಿತಿಯನ್ನು ತಾವು ನಿರ್ಮಾಣ ಮಾಡುತ್ತಿದ್ದೀರಿ. You are creating lacuna in Law. ಇದು ಎನು ಹೇಳುತ್ತೆ, ಇದು ಎಲ್ಲೋ ಒಂದು ಕಡೆ ತಾವು ಉದ್ದಿಮೆದಾರರ ಪರವಾಗಿದ್ದೀರಿ ಎಂದು ನಮಗೆ ಅನಿಸುತ್ತಿದೆ. You have been playing in the hands of industrialists ಅಥವಾ ಇನ್‌ವೆಸ್ಟರ್ಸ್ ನೇರ. ಇದು ಈ ಭಾವನೆ ಎಕೆ ಆಗುತ್ತೆ ಎಂದರೆ ಹೊರಗಡೆಯಿಂದ ಇನ್‌ವೆಸ್ಟಾರ್ಸ್‌ಗಳು ಬರುತ್ತಿದ್ದಾರೆ. ಅವರಿಗೆ ಈ ರಾಜ್ಯದ, ಈ ರಾಷ್ಟದ ಲೇಬರ್ ಲಾಸ್‌ಗಳ ತಲೆ ಬಿಸಿಯಾಗಿಬಿಟ್ಟಿದೆ. ಅವರು ಒಂದೊಂದು ರಿಲ್ಯಾಕ್ಷೇಷನ್ ಅನ್ನು ಕೇಳುತ್ತಿದ್ದಾರೆ. ತಾವೂ ಕೊಡಬೇಕಾಗುತ್ತೆ. You cannot be regid while attaracting the investors from outside. ಆದರೆ ಇದೆಲ್ಲಾ ಮಾಡುವುದಕ್ಕೆ ಮೊದಲೇ ಇಲ್ಲಿಯೇ ಬೆಳೆದಿರುವವನು, ಇಲ್ಲಿ ಹುಟ್ಟಿ ಕೂಲಿ ಮಾಡಿಕೊಂಡು ಸೇರಿಕೊಂಡಿರುವವನು, ಅವನ ಯೋಗಕ್ಷೇಮದ ಬಗ್ಗೆ ತಾವು ಹೀಗೆ ಮಾಡಬಾರದು, ಪ್ಲೀಸ್ ಈಗ ಎನು ಅಧಿಕಾರ ಇದೆ,

ಅದನ್ನು ಹಾಗೆಯೇ ಉಳಿಸಿ Let the standing orders be approved by the department, then only you can execute them.

ಶ್ರೀ ತನ್ವೀರ್ ಸೇಠ್ : ಮಾನ್ಯ ಉಪಾಧ್ಯಕ್ಷರೆ, ಡ್ರಾಫ್ಟ್ ನಮ್ಮ ಸ್ಟಾಂಡಿಂಗ್ ಆರ್ಡರ್ಸ್ ಏನು ಇದೆ, ಅದನ್ನು ಯಾವುದೇ ಆಲ್ಟ್ರೇಷನ್ ಇಲ್ಲದೆ ನಾವು ಇಟ್ಟುಕೊಂಡಿದ್ದೇವೆ. ನಾವೇನು ಹೇಳಿದ್ದೇವೆಂದರೆ ಡ್ರಾಫ್ಟ್ ಮಾಡೆಲ್ ಸ್ಟ್ಯಾಂಡಿಂಗ್ ಆರ್ಡರ್ಸ್ ಎನು ಇದೆ, ಅದನ್ನು ಚರ್ಚೆಮಾಡಿ ಒಪ್ಪಂದಕ್ಕೆ ತರುವಂಥದ್ದು. The Act is there. I am just bringing amendment to the Section ಎಲ್ಲಿ ಯಾವುದನ್ನು ನಾನು ತಿದ್ದುಪಡಿ ಮಾಡಬೇಕು,

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಏಕೆ ಆ ಅಮೆಂಡ್‌ಮೆಂಟ್

ಶ್ರೀ ತನ್ವೀರ್ ಸೇಠ್ : ನೀವು ಎತ್ತಿರುವ ವಿಚಾರಕ್ಕಾದರೂ ನಾನು ಉತ್ತರ ಕೊಡುವುದಕ್ಕಾದರೂ ಬಿಡಿ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : What for you need that amendment?

ಶ್ರೀ ತನ್ವೀರ್ ಸೇಠ್ : ಸ್ವಾಮಿ I will tell you.

ಶ್ರೀ ಜೆ. ಸಿ. ಮಾಧುಸ್ವಾಮಿ : ಆಬ್ಜೆಕ್ಟೀವ್‌ನಲ್ಲಿ ನೀವು ಹೇಳುವುದೇನು? ಡಿಲೇ ಆಗುತ್ತಿದೆ, ಟು ಕಂಡೋನ್ ಡಿಲೇ. ನೀವು ಉದ್ದೇಶಗಳನ್ನು ಏನು ಹೇಳುತ್ತೀರಿ, ಐದು ತಿಂಗಳವರೆಗೆ ಅವಕಾಶವನ್ನು ಕೊಟ್ಟಿದ್ದೇವೆ, ಐದು ತಿಂಗಳೂ ಎಕ್ಸೀಡ್ ಆಗುತ್ತೇ, ಡಿಲೇ ಆಗುತ್ತದೆ ಎಂದು You tighten your department. ಏಕೆ ಡಿಲೇ ಆಗಬೇಕು? ನಿಮಗೆ ಸರ್ಕಾರಕ್ಕೆ ಅಥವಾ ಲೇಬರ್ ಇಲಾಖೆಗೆ ಇರುವ ಶಕ್ತಿಯನ್ನು ಏಕೆ ಕುಂದು ಮಾಡಿಸುವುದಕ್ಕೆ ನೀವು ಮಂತ್ರಿಯಾಗಿದ್ದೀರಿ? ನಮಗೆ ಅರ್ಥವಾಗುತ್ತಿಲ್ಲ. You have to strengthen your department as Labour Minister. ನಿಮ್ಮ ಹತ್ತಿರ ಅದು ಬರಬೇಕು. ನೀವು ಅದರಮೇಲೆ ಒಂದು ಹತೋಟಿಯನ್ನು ಇಟ್ಟುಕೊಂಡರೆ ಆಗ ಕಾರ್ಮಿಕರ ಕಲ್ಯಾಣ ಕೆಲಸಗಳನ್ನು ನೀವು ಮಾಡಬಹುದಾಗಿರುತ್ತೆ. You are opening the getes. ಬೇಡವೇ ಬೇಡ. ನಮ್ಮ ಹತ್ತಿರ ಬರುವುದೇ ಬೇಡ, ನೀವು ಫ್ಯಾಕ್ಟರಿಯಲ್ಲಿ ಹೇಗಾದದರೂ ಮಾಡಿಕೊಂಡು ಹೋಗ್ರಿ ಎಂದರೆ ಹೇಗೆ? This is too much. ಇವರು ಹೇಳಿರುವ ಕಾರಣ ಕೂಡ ಸಕಾರಣವಲ್ಲ ಅಧ್ಯಕ್ಷರೇ.

ಶ್ರೀ ತನ್ವೀರ್ ಸೇಠ್ : ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಏನಾಗಿದೆ ಎಂದರೆ ಪ್ರತಿಯೊಂದು ಸ್ಟ್ಯಾಂಡಿಂಗ್ ಆರ್ಡರ್ಸ್ ನಮ್ಮ ಇಲಾಖೆಗೆ ಬಂದು ಅಟ್‌ಸ್ಟೇಷನ್ ಆಗುವಂಥದ್ದು. ಐದು ತಿಂಗಳ ಒಳಗಾಗಿ ಕಳುಹಿಸಿಕೊಡುಬೇಕೆಂದು ಏನು ನಿಯಮಗಳಿವೆ, ಅದರ ಪ್ರಕಾರ ಈವರೆವಿಗೂ ಆಗುತ್ತಿದೆ. ಅದೇನಾಗುತ್ತೆ, ವಿನಾಕಾರಣ ವಿಳಂಬವಾಗುವಂಥಾದ್ದನ್ನು ನಾವೇನು ನೋಡುತ್ತಿದ್ದೇವೆ, ಹಾಗೂ ಈವರೆಗೂ ಇರುವಂಥ ಒಂದು ಅನುಭವ ಆಧಾರದ ಮೇಲೆ ನಾವೇನು ಮಾಡಿದ್ದೇವೆ, ಆ ಮಾಡೆಲ್ ಸ್ಟ್ಯಾಂಡಿಂಗ್ ಆರ್ಡರ್ಸ್ ಏನು ಇದೆ, ಅದನ್ನು ಅವರು ಮಾಲೀಕ ಪ್ರತಿನಿಧಿಗಳು ಮತ್ತೆ ಕಾರ್ಮಿಕ ಸಂಘಟನೆಗಳ ಜೊತೆಗೆ ಒಪ್ಪಂದ ಮಾಡುವಂಥದ್ದು ಒಂದು ಮಾಡಿದ್ದೇವೆ ಎಲ್ಲಿ

ಇನ್‌ಕ್ಲೂಷನ್ ಆಫ್ ಅಥವಾ ಡಿಸ್‌ಪ್ಯೂಟ್ ಆರೈಸ್ ಆಗುತ್ತದೆ, ಆ ಸಂದರ್ಭದಲ್ಲಿ ನಮ್ಮ ಇಲಾಖೆಗೆ ಅವರು ಬರಲೇಬೇಕಾಗುತ್ತದೆ. ಇದೇನಾಗುತ್ತೆ ಎಂದರೆ . . . .

ಶ್ರೀ ಜೆ. ಎ. ಶ್ರೀರಾಮರೆಡ್ಡಿ : ಯಾರು ಡಿಸ್‌ಪ್ಯೂಟ್ ರೈಸ್ ಮಾಡುವುದು?

ಶ್ರೀ ತನ್ವೀರ್ ಸೇಠ್ : ಕಾರ್ಮಿಕ ಸಂಘಟನೆಗಳು.

ಶ್ರೀ ಜೆ. ಎ. ಶ್ರೀರಾಮರೆಡ್ಡಿ : ಇವರು ಹೇಳುತ್ತಿರುವುದು ಇದೇನೂ ಅರ್ಥವಾಗುತ್ತಿಲ್ಲ. ಸ್ಟ್ಯಾಂಡಿಂಗ್ ಆರ್ಡರ್ ಎಂದು ಹೇಳಿ ಅವರ ಜೊತೆ ಒಪ್ಪಂದ ಮಾಡಿಕೊಂಡಿದ್ದೇವೆಂದು ಹೇಳಿದ ಮೇಲೆ ಇನ್ನೊಬ್ಬರಿಗೆ ಡಿಸ್‌ಪ್ಯೂಟ್ ರೈಸ್ ಮಾಡುವುದಕ್ಕೆ ರೈಟ್ಸ್ ಬರುವುದಿಲ್ಲ. What are you talking?

ಶ್ರೀ ಜೆ. ಸಿ. ಮಾಧುಸ್ವಾಮಿ : ಯಾವುದೇ ಒಬ್ಬ ವರ್ಕರ್ಸ್ ಡಿಸ್‌ಪ್ಯೂಟ್ ಮಾಡದೆ ಇದು ಅಪ್ರೂವ್ ಆಗಕೊಡದು. It is already there. ಮತ್ತೆ ಅದಕ್ಕೆ ಛೇಂಜಸ್ ಎತಕ್ಕೆ ಬೇಕು?

ಶ್ರೀ ತನ್ವೀರ್ ಸೇಠ್ : ಇಲ್ಲಿ ಎನಾಗುತ್ತೆ, ಒಂದೊಂದು ಕಾರ್ಖಾನೆಗಳಲ್ಲಿ ಮಾಡೆಲ್ ಸ್ಟ್ಯಾಂಡಿಂಗ್ ಆರ್ಡರ್ಸ್‌ನಲ್ಲಿ ಎನಾಗುತ್ತೆ, ಅವರ ಮೇಲೆ ಯಾವುದೇ ಒಂದು ಸಂದರ್ಭದಲ್ಲಿ ಶಿಕ್ಷೆಗೆ ಒಳಪಡಿಸುವ ಸಂದರ್ಭದಲ್ಲಿ ಡೊಮೆಸ್ಟಿಕ್ ಎನ್‌ಕ್ವೈರಿಯನ್ನು ಯಾವ ರೀತಿ ನಡೆಸಬೇಕು, ಅದಕ್ಕೆ ಯಾವ ಆಧಾರದಮೇಲೆ ಕಾರ್ಮಿಕರಿಗೆ ರಕ್ಷಣೆಯನ್ನು ಕೊಡಬೇಕು, ಇದೆಲ್ಲಾ ಪ್ರತಿಯೊಂದು ಇರುತ್ತೆ. ಎಲ್ಲಿ ಕಾರ್ಮಿಕ ಸಂಘಟನೆಗಳು ಇದನ್ನು ಬಿಟ್ಟು ಇನ್ನು ಸ್ವಲ್ಪ ಹೆಚ್ಚು ಬೇಕೆಂದು ಕೇಳುತ್ತಾರೆ, ಅಥವಾ ಎಲ್ಲಿ ಒಂದು ಡಿಸ್‌ಪ್ಯೂಟ್ ಅರೈಸ್ ಆಗುತ್ತೆ, ಅಥವಾ ಮಾಲೀಕರು ಇದನ್ನು ಮಾಡುವುದಕ್ಕಾಗುವುದಿಲ್ಲವೆಂದು ಎಲ್ಲಿ ಹೇಳುತ್ತಾರೆ, That will definitely come to my department.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಎಷ್ಟು ಪರ್‌ಸೆಂಟೇಜ್ ಛೇಂಜ್ ಮಾಡುವುದಕ್ಕೆ ಅವಕಾಶ ಇದೆ?

ಶ್ರೀ ತನ್ವೀರ್ ಸೇಠ್ : ಅವರಿಗೆ ಛೇಂಜ್ ಮಾಡುವ ಅಧಿಕಾರವನ್ನೇ ಕೊಟ್ಟಿಲ್ಲ.

ಶ್ರಿ ಕೆ. ಜಯಪ್ರಕಾಶ್ ಹೆಗ್ಡೆ : ಏಕೆ? ಅವರಿಗೆ ಛೇಂಜ್ ಮಾಡುವುದಕ್ಕೆ ಅವಕಾಶವೇ ಇಲ್ಲದಿದ್ದರೆ . . . . . .

(ಗೊಂದಲ)

ಶ್ರೀ ಜೆ. ಎ. ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ones the standing order has been submitted telling that is has been passed between the management and the worker ..

ಶ್ರೀ ತನ್ವೀರ್ ಸೇಠ್ : ಕೇಳಿ. ಒಂದೇ ನಿಮಿಷ.

ಶ್ರೀ ಜೆ. ಎ. ಶ್ರೀರಾಮರೆಡ್ಡಿ : ನೀವು ಕೇಳಿದ್ದಕ್ಕೆ ಹೇಳುತ್ತಿದ್ದೇನೆ. ನೀವು ಮತ್ತೆ ಒಂದು ನಿಮಿಷ ಎಂದರೆ ನಾವೇನು ಮಾಡುವುದು?

ಶ್ರೀ ತನ್ವೀರ್ ಸೇಠ್ : ನಾನು ಉತ್ತರ ಕೊಡುವುದು ಬೇಡವೆಂದರೆ ಹೇಗೆ? ಈಗ ನಾನೇನು ಹೇಳಬೇಕಾಗಿದೆ, ನಿಮಗೆ ಆ ಉತ್ತರ ಸಮಾಧಾನವಾಗಿಲ್ಲವೆಂದರೆ ಮತ್ತೆ ಮತ್ತೆ ಕೇಳಿದ್ದಕ್ಕೆ ನಾನು ಉತ್ತರವನ್ನು ಕೊಡುತ್ತೇನೆ.

ಶ್ರೀ ಜೆ. ವಿ. ಶ್ರೀರಾಮರೆಡ್ಡಿ : ಬಿಲ್‌ನಲ್ಲಿ ನೀವು ಹೇಳಿದ್ದೀರಿ ಸ್ವಾಮಿ.

ಶ್ರೀ ತನ್ವೀರ್ ಸೇಠ್ : ಹಾದು

ಶ್ರೀ ಜೆ. ವಿ. ಶ್ರೀರಾಮರೆಡ್ಡಿ : ಬಿಲ್‌ನಲ್ಲಿ ಹೇಳಿದ್ದೀರಿ ನೀವು. ಪಾಯಿಂಟ್ ಎನೆಂದರೆ ಸ್ಟ್ಯಾಂಡಿಂಗ್ ಆರ್ಡರ್ಸ್‌ನ್ನು ಮ್ಯಾನೇಜ್‌ಮೆಂಟ್, ವರ್ಕರ್ಸ್ ರಾಜಿ ಮಾಡಿಕೊಂಡು ಸಬ್‌ಮಿಟ್ ಮಾಡಿದರೆ ಅದು ನಮ್ಮ ಇಲಾಖೆಗೆ ಪರಿಶೀಲನೆಗೆ ಬರತಕ್ಕಂಥ ಅವಶ್ಯಕತೆ ಇಲ್ಲ ಎಂದು ನೀವು ಹೇಳಿದ್ದೀರಿ. ಯಾವವ ವರ್ಕರ್ಸ್ ಜೊತೆ ಅವನು ಮಾತನಾಡುತ್ತಾನನೆ? ಯಾರೋ ಐದು ಜನರನ್ನು ಇಟ್ಟುಕೊಂಡು ನಾನು ಮಾತನಾಡಿದ್ದೇನೆಂದರೆ ನೀವು ಎನು ಮಾಡುತ್ತೀರಿ? ಹಾಗಾದರೆ ನೀವು ಒಂದು ಪ್ರಾವಿಷನ್ ಅನ್ನುಮಾಡಿ. Even after the standing order recongnized by the Government, if any worker rises the dispute, then that standing order will be under question. It should be under question. ಅಂತ ಮಾಡಿ

ಶ್ರೀ ತನ್ವೀರ್ ಸೇಠ್ : ಅದು It is already there. ಎಂದು ಬರೆದಿದ್ದೇನೆ.

ಶ್ರೀ ಜೆ. ವಿ. ಶ್ರೀರಾಮರೆಡ್ಡಿ : ಎಲ್ಲಿ ಬರೆದಿದ್ದೀರಿ? ಬಿಲ್‌ನಲ್ಲಿ ಎಲ್ಲಿದೆ?

ಶ್ರೀ ತನ್ವೀರ್ ಸೇಠ್ : ನನ್ನ ಕೈಯಲ್ಲಿರುವುದು ಬೇರೆಯದಲ್ಲ. The bill seeks to achieve the above object and provide for self certification. ಈಗ ಎನಿತ್ತು, ನನ್ನ ಇಲಾಖೆ ಏನು ಅಟೆಸ್ಟ್ ಮಾಡಿ ಕೊಡುತ್ತಿತ್ತು, ಅದನ್ನು ಸೆಲ್ಫ್ ಸರ್ಟಿಫಿಕೇಷನ್‌ಗೆ ಕೊಟ್ಟಿದ್ದೇವೆ. ಅಷ್ಟೆ. There is no change in the procedure at all. ಅದರ ಜೊತೆಗೆ ಏನು ಹೇಳಿದ್ದೇವೆಂದರೆ. On mutual agreement of the employer and the workmen. Reserving the right of approaching the certifying officer in case of disagreement on any clause.

ಶ್ರೀ ಜೆ. ಸಿ. ಮುದ್ದುಸ್ವಾಮಿ : ಮಾನ್ಯ ಸಚಿವರೇ, Don't mislead us. ನೀವು ಆಬ್ಜೆಕ್ಟೀವ್‌ನಲ್ಲಿ ಹೇಳಿದ್ದೆಲ್ಲಾ ಪಾರ್ಟ್ ಆಫ್ ಲಾ ಆಗುತ್ತೆ ಎಂದು ತಿಳಿದುಕೊಂಡು ಇಲ್ಲಿ ನಾವು ವಾದ ಮಾಡುವವರಲ್ಲ. ನೀವು ಉದ್ದೇಶಗಳಲ್ಲಿ ಹೇಳುವುದೆಲ್ಲಾ ಕಾನೂನಿನ ಭಾಗ ಆಗುವುದಿಲ್ಲ ಸನ್ಮಾನ್ಯ ಮಂತ್ರಿಗಳೇ What is going to be amended ಅದರಲ್ಲಿ ಇದೆಲ್ಲಾ ಸೇರಿಲ್ಲ.

ಶ್ರೀ ಜೆ. ವಿ. ಶ್ರೀರಾಮರೆಡ್ಡಿ : ಇದು That is most important.

ಶ್ರೀ ಜೆ. ಸಿ. ಮಾಧುಸ್ವಾಮಿ : ಉದ್ದೇಶಗಳಲ್ಲಿ ನೀವು ಎನೇನೋ ಹೇಳುತ್ತೀರಿ. ನಾನು ಈ ವಿಧಾನಸಭೆಯನ್ನು ಇಂದ್ರಪ್ರಸ್ಥ ಮಾಡೋಣವೆಂದು ಮಾಡಿದ್ದೇನೆ, ಇದನ್ನು ಸ್ವರ್ಗ ಮಾಡೋಣವೆಂದು ಇದ್ದೇನೆ ಎಂದರೆ, ಇದು ಸ್ವರ್ಗವಾಗಿಬಿಡುತ್ತಾ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನೀವು ಓದುತ್ತಿರುವುದು ಆಬ್ಜೆಕ್ಟೀವ್ಸ್.

ಶ್ರೀ ಜೆ. ಸಿ. ಮಾಧುಸ್ವಾಮಿ: ಆದರೆ Objectives are different. Actual enactment is different.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅದನ್ನು ಮಾರ್ಕ್ ಮಾಡಿಕೊಂಡಿರುವುದು ಆಬ್ಜೆಕ್ಟೀವ್‌ಗೆ ಮಾತ್ರ. ಆಕ್ಟ್‌ನಲ್ಲಿ ಬಂದಿದೆ ಅಂತ. ಯಾವ ಸೆಕ್ಷನ್‌ನಲ್ಲಿ ಹೇಳಿ. ಯಾವ ಸೆಕ್ಷನ್‌ನಲ್ಲಿ ಬಂದಿದೆ ಹೇಳಿ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಇದು Directive Principles of State Policy ಇದ್ದ ಹಾಗೆ ಸಂವಿಧಾನದಲ್ಲಿ Directive Priniciples of State Policy ಇದೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಇದನ್ನು ವಿತ್‌ಡ್ರಾ ಮಾಡಿಕೊಳ್ಳಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಯಾವ ಸೆಕ್ಷನ್‌ನಲ್ಲಿದೆ ಓದಿ.

ಶ್ರೀ ತನ್ವೀರ್ ಸೇಠ್ : Industrial Employment Standing orders Act of 1946 ಇದನ್ನು ನಮ್ಮ ಸೆಕ್ಷನ್ 3, ಸಬ್‌ಸ್ಟಿಟ್ಯೂಷನ್ ಆಫ್ ಸೆಕ್ಷನ್ 3, ಅದನ್ನು ಮಾಡಿ ಇನ್ಸುರೇಷನ್ ಎನು ಮಾಡಿದ್ದೇವೆ. The standing order prepared as required under sub section shall refer to every matter set ort in the schedule which may be applicatble to the Industrial establishment and where model standing order save been prescribed shall be for practical in conformity and such model standing order ಎನ್ನುವುದನ್ನು ಕೊಟ್ಟಿದ್ದೇವೆ. ಇಲ್ಲಿ ಉದ್ದೇಶಗಳಲ್ಲಿ ನಾವೇನು ಮಾಡಿದ್ದೇವೆ? ಮಧ್ಯೆ ಮಾತನಾಡಿದರೆ ಹೇಗೆ ನನಗೆ ಎನಾದರೂ ಹೇಳುವುದಕ್ಕೆ ಬಿಡಿ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ನೀವು ಹೇಳಿದ್ದೆ ಹೇಳುತ್ತಿದ್ದೀರಿ. ನೀವು ಆಬ್ಜೆಕ್ಟೀವ್‌ನಲ್ಲಿ ಇಟ್ಟಿದ್ದೀರಿ. ಆಕ್ಟ್‌ನಲ್ಲಿ ಎಲ್ಲಿ ಬಂದಿದೆ?

ಶ್ರೀ ತನ್ವೀರ್ ಸೇಠ್ : ಸೆಕ್ಷನ್ 3 ಎಂದು ಹೇಳುತ್ತಿಲ್ಲವಾ?

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಸೆಕ್ಷನ್ 3ರಲ್ಲಿ ಏನು ಇದೆ?

ಶ್ರೀ ತನ್ವೀರ್ ಸೇಠ್ : ನೀವು ಸೆಕ್ಷನ್ 3 ಓದಿ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ನೀವೇ ಓದಿ ಸೆಕ್ಸನ್ 3ರಿಗೂ ಸ್ಟ್ಯಾಂಡಿಂಗ್ ಆರ್ಡರ್‌ಗೂ ಸಂಬಂಧವೇನು? ಸೆಕ್ಷನ್ (3) ರಿಗೂ ಸ್ಟ್ಯಾಂಡಿಂಗ್ ಆರ್ಡರಿಗೂ ಎನು ಸಂಬಂಧ ಸಾರ್ ?

ಶ್ರೀ ತನ್ವೀರ್ ಸೇಠ್ : ನಾನು ಆಕ್ಟನ್ನು ರೆಫರ್ ಮಾಡಿದಾಗ ಸ್ಟ್ಯಾಂಡಿಂಗ್ ಆರ್ಡರ್ ಎಂದು ಮತ್ತೆ ನೀವು ಕೇಳಿದರೆ ನಾನೇನು ಮಾಡಲಿ?

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಸ್ಟ್ಯಾಂಡಿಂಗ್ ಆರ್ಡರ್‌ಗೆ, ನಿಮ್ಮ ಉದ್ದೇಶ ಎನು? What for you brought it?

ಶ್ರೀ ತನ್ವೀರ್ ಸೇಠ್ : ಉದ್ದೇಶವಾದರೂ ಹೇಳುವುದಕ್ಕೆ ಬಿಡಿ. ಈ ತಿದ್ದುಪಡಿ ತಂದಿರುವಂತಹ ಮೂಲ ಉದ್ದೇಶ ಇಷ್ಟೇ ಯಾವುದೇ ಒಂದು ಕಾರ್ಖಾನೆ ಸ್ಥಾಪನೆ ಆಗುವಂತಹ ಸಂದರ್ಭದಲ್ಲಿ ಮಾಲೀಕರಿಗೆ ಈಗಾಗಲೇ ನಾವು ಈ ಇಂಡಸ್ಟ್ರಿಯಲ್ ಎಂಪ್ಲಾಯಿಮೆಂಟ್ ಸ್ಟ್ಯಾಂಡಿಂಗ್ ಆರ್ಡರ್ಸ್ ಆಕ್ಟ್ ಪ್ರಕಾರ ಮಾಡಲ್ ಸ್ಟ್ಯಾಂಡಿಂಗ್ ಆರ್ಡರ್ಸ್‌ನ್ನು ಪ್ರೆಸ್ಕ್ರೈಬ್ ಮಾಡಿದ್ದೇವೆ. ಅದರಲ್ಲಿ ಯಾವುದೇ ತಿದ್ದುಪಡಿ ಇಲ್ಲ. ಅದನ್ನು ತಿದ್ದುಪಡಿ ಮಾಡುವಂತಹ ಅಧಿಕಾರಿಯನ್ನು ಯಾರಿಗೂ ಕೊಟ್ಟಿಲ್ಲ. ಆದರೆ ಐದು ತಿಂಗಳ

ಒಳಗಾಗಿ ಮಾಲೀಕರು ಯಾವುದೋ ಒಂದು ಕಾರಣಕ್ಕಾಗಿ ಒಪ್ಪಂದ ಮಾಡಿಕೊಂಡಿದ್ದೇವೆ ಎಂದು ಹೇಳಿ ಯಾರದ್ದೋ ಒಂದು ನಾಲ್ಕೂ ಜನರು ರುಜು ಮಾಡಿ ನನ್ನ ಇಲಾಖೆಗೆ ಅಟ್‌ಸ್ಟೇಷನ್‌ಗೆ ಮಾತ್ರ ಕಳಿಸಿ ಕೊಡುತ್ತಿದ್ದರು. ನಾವೇನು ಮಾಡಿದ್ದೇವೆ ಎಂದರೆ In toto the model standing orders that prescribed such industry ಅದನ್ನು ಕಾರ್ಮಿಕ ಪ್ರತಿನಿಧಿಗಳು, ಕಾರ್ಮಿಕ ಸಂಘಟನೆ ಜೊತೆಗೆ ನೀವು ಚರ್ಚೆ ಮಾಡಿ ಮಾಡುವುಂತಹದು ಮಾಡಬೇಕು ಎನ್ನುವುದನ್ನೇ ಮಾಡುರುವಂತಹದು. ಅದನ್ನು ಮಾಡಿರುವುದರಿಂದ ಎನಾಗುತ್ತದೆ? ಯಾವಾಗ ಕಾರ್ಮಿಕರು ಮತ್ತು ಮಾಲೀಕರ ಮಧ್ಯೆ ಒಂದು ಒಪ್ಪಂದ ಆಗದೇ ಇರುವಂತಹ ಸಂದರ್ಭದಲ್ಲಿ ಒಂದು ಡಿಸ್ಪ್ಯೂಟ್ ಅರೈಸ್ ಆದರೆ ಮಾತ್ರ ನನ್ನ ಇಲಾಖೆಗೆ ಬರುವಂತಹುದು. ಅಥವಾ ಎಲ್ಲಿ ಮಾಡೆಲ್ ಸ್ಟ್ಯಾಂಡಿಂಗ್ ಆರ್ಡರ್ಸ್ ಸಾರಸಗಟಾಗಿ ಅವರು ಒಪ್ಪಂದಕ್ಕೆ ತರುವಂತಹ ಉದ್ದೇಶ ಇರುತ್ತದೆ ಅಲ್ಲಿ There will be no question. ಆ ಸ್ಟ್ಯಾಂಡಿಂಗ್ ಆರ್ಡರ್ ಅಪ್ಲಿಕೇಬಲ್ ಆಗಿದೆ ಎನ್ನುವುದನ್ನು ನಾವು ಭಾವಿಸಿಕೊಳ್ಳತಕ್ಕದ್ದು. Only the certification ಎನು ಇದೆ, ಸೆಲ್ಫ್, ಸರ್ಟಿಫಿಕೇಶನ್ ಪದ್ಧತಿ ಮಾತ್ರ ತರುವಂತಹ ಉದ್ದೇಶ ಮಾತ್ರ ಇಟ್ಟುಕೊಂಡಿರುವುದು. The model standing orders are pprescribed by my own department and be the Government. ಎಲ್ಲಿ ನಾವು ಪ್ರೆಸ್ಕೈಬ್ ಮಾಡಿರುವಂಥದಕ್ಕೆ ತಕರಾರು ಉಂಟಾಗುತ್ತದೆ ಅದು ಮಾತ್ರ ನಮ್ಮ ಇಲಾಖೆಗೆ ವಾಪಸ್ ಬರುತ್ತದೆ. ಎಲ್ಲಿ ನಾವು ಮಾಡಿರುವಂತಹದು ನೇರವಾಗಿ ಅವರು ಒಪ್ಪಿಕೊಳ್ಳುವಂಥಾದ್ದು ಆಗುತ್ತದೆ ಅದು ನನ್ನ ಇಲಾಖೆಗೆ ಬರುವುದು ಬೇಡ ಎನ್ನುವುದನ್ನು ನಾವು ಮಾಡಿದ್ದೇವೆ ಅಷ್ಟೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ಸ್ಟಾಂಡಿಂಗ್ ಆರ್ಡರ್ಸ್ ಮಾಡೆಲ್‌ನಲ್ಲಿರುತ್ತದೆ. ಯಾವುದೇ ಡಿಸ್‌ಪ್ಯೂಟ್ ಆಗಿ ಸ್ಟ್ರೈಕ್ ಆಗಿ, ಸೆಟಲ್‌ಮೆಂಟ್ ಆರ್ಡರ್ಸ್ ಆಗುತ್ತವೆ. ಬರೇ ಅಷ್ಟೆ ಇರುವುದಿಲ್ಲ. ಇಂಡಸ್ಟ್ರಿಯಲ್ಲಿ Whatever settlement takes place, ಅಲ್ಲಿಂದ ಮುಂದಕ್ಕೆ ಅದು ಸ್ಟ್ಯಾಂಡಿಂಗ್ ಆರ್ಡರ್ಸ್ ಆಗುತ್ತದೆ. ಇದೆಲ್ಲಾ ಕಾನೂನು ಒಳಗೆ ಇದೆಯಾ? ಇದೆಲ್ಲಾ ನಮ್ಮ ಲೇಬರ್ ಹಿತಾಸಕ್ತಿಯಲ್ಲಿ ಆಗುತ್ತಿದೆಯಾ ಎಂದು ನೋಡುವುದಕ್ಕೆ ಅಟ್‌ಸ್ಟೇಷನ್, ಅಪ್ರೂವಲ್ ರೆಕಗ್ನೈಷನ್, ಕೊಡಬೇಕಾಗಿತ್ತು ಇವರಿಗೆ ಕಾನೂನು ಕೆಳಗೆ ಅವಕಾಶ ಇತ್ತು. ಸನ್ಮಾನ್ಯ ಸಚಿವರು ನೀವು ಮಾಡುತ್ತಿರುವುದು ಎನು? ಐದು ತಿಂಗಳು ಡಿಲೇ ಆಗಿ ಬಿಡುತ್ತದೆ. ಅದರ ಬದಲು ಅವರೇ ಆ ಎಂಪ್ಲಾಯೀಸ್ ಮತ್ತೆ ಆ ಫಾರ್ಮ್‌ನವರು ಕುಳಿತುಕೊಂಡು ಎನಾದರೂ ಸೆಟಲ್‌ಮೆಂಟ್ ಮಾಡಿಕೊಂಡರೆ ನಮ್ಮ ಹತ್ತಿರ ತರುವುದೇ ಬೇಡವೆಂದು ಸಾರಾಸಗಟಾಗಿ ಒಂದು ಶಾಸನ ತಂದಿಟ್ಟಿದ್ದೀರಿ. ನಿಮ್ಮ ಹತ್ತಿರ ಇದ್ದ ಅಧಿಕಾರವನ್ನು, ನೀವು ನೋಡಬೇಕಾಗಿದ್ದಂತಹ ಮೂಲವನ್ನು ನೀವು ನೋಡುವುದಿಲ್ಲವೆಂದು ಎಕೆ ತೀರ್ಮಾನ ತೆಗೆದುಕೊಳ್ಳುತ್ತೀರಿ ಎಂಬುದು ನಮಗೆ ಅರ್ಥ ಆಗುತ್ತಿಲ್ಲ Once they become standing orders. ಮತ್ತೆ ಅದನ್ನು ಕೊಶ್ಚನ್ ಮಾಡುವುದಕ್ಕೆ ಬರುವುದಿಲ್ಲ. ಮತ್ತೆ ಅದು ಡಿಸ್‌ಪ್ಯೂಟ್ ಆಗಬೇಕಾಗುತ್ತದೆ. ಮತ್ತೊಂದು ಅಪೀಲ್ ಹಾಕಬೇಕಾಗುತ್ತದೆ. ಒಂದು ಕಂಪನಿಯಲ್ಲಿ ಒಂದೇ ಯೂನಿಯನ್ ಇರುವುದಿಲ್ಲ 100 ಪರ್ಸೆಂಟ್ ವರ್ಕರ್ಸ್

ಒಂದಾಗಿರುವುದಿಲ್ಲ ಸಾರ್. ಒಬ್ಬರನ್ನೋ ಇಬ್ಬರನ್ನೋ ಯಾರನ್ನೋ ಟ್ಯಾಂಪರ್ ಮಾಡಿ ಸ್ಟ್ಯಾಂಡಿಂಗ್ ಆರ್ಡರ್ಸ್‌ಗೆ ಸೈನ್ ಹಾಕಿಸಿಕೊಂಡು In the interest of the employees or labour, ವಿರುದ್ಧವಾದ ಸ್ಟ್ಯಾಂಡಿಂಗ್ ಆರ್ಡರ್ಸ್ ಆದರೆ ನಿಮಗೆ ಚೆಕ್ ಎಲ್ಲಿದೆ ಅಂತ ನೀವು ಕೇಳುವುದಕ್ಕೆ ಅಧಿಕಾರ ಎಲ್ಲ ಉಳಿಸಿಕೊಳ್ಳುತ್ತಿದ್ದೀರಿ? When you are giving away away everything ನಿಮ್ಮ ಮುಂದೆ ಅದು ಬರಬೇಕಾಗಿತ್ತು. ಸ್ಟ್ಯಾಂಡಿಂಗ್ ಆರ್ಡರ್ಸ್ ನಿಮ್ಮ ಮುಂದೆ ಬರಬೇಕಾಗಿತ್ತು. ನೀವು ನೋಡಬೇಕಾಗಿತ್ತು ಎನ್ನುವುದನ್ನು ಅವರಿಗೇ ಬಿಡುತ್ತೇವೆ ಎಂದು ಹೇಳಿ ಬಿಲ್ ತಂದರೆ ನಾವು ಹೇಗೆ ಇದಕ್ಕೆ ಒಪ್ಪುವುದು? In whose interest you have brought the Bill?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಉಪಾಧ್ಯಕ್ಷರೆ, As I have understood the Minister, ಅವರು ಎನು ಹೇಳುತ್ತಾರೆ ಎಂದರೆ ಮಾಡೆಲ್ ಸ್ಟ್ಯಾಂಡಿಂಗ್ ಆರ್ಡರನ್ನು ಕಳುಹಿಸುತ್ತಾರೆ. that is binding. ಹಾಗಾದರೆ ಪುನಃ ಅವಕಾಶ ಎಕೆ? ಅವರಿಬ್ಬರು ಸೈನ್ ಮಾಡಿ ವಾಪಸ್ ಕಳುಹಿಸುವುದು ಎಕೆ? ಸಮೋಸ್ ಅವರಿಗೆ ಎನಾದರೂ ತೊಂದರೆಗಳಾದರೆ, ಛೇಂಜಸ್ ಬೇಕಿದ್ದರೆ ಅವರೇ ಡಿಸ್‌ಪ್ಯೂಟ್ ಹಾಕಲಿ. ಅದನ್ನು ಬಿಟ್ಟು ಪುನಃ ಇನ್ನೊಂದು ಅವಕಾಶ ಎಕೆ ಕೊಡುತ್ತೀರಿ? ಅವರಲ್ಲೇ ಸ್ಟೈಲ್ ಮಾಡಿಕೊಳ್ಳುವುದಕ್ಕೆ ಅವಕಾಶ ಎಕೆ ಕೊಡುತ್ತೀರಿ?

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾಡೆಲ್ ಸ್ಟ್ಯಾಂಡಿಂಗ್ ಆರ್ಡರ್ಸ್‌ನ್ನು ನಾವು ಫ್ರೇಮ್ ಮಾಡುತ್ತೇವೆಂದು ಹೇಳುತ್ತೀರಿ. ಸರ್ಕಾರ ಫ್ರೇಮ್ ಮಾಡುತ್ತದೆ. ಆ ಮಾಡೆಲ್ ಸ್ಟ್ಯಾಂಡಿಂಗ್‌ನ್ನು ನಾವು ಮ್ಯಾನೇಜ್‌ಮೆಂಟ್ ಮುಂದೆ ಪ್ಲೇಸ್ ಮಾಡುತ್ತೇವೆ. ಆ ಮಾಡೆಲ್ ಆರ್ಡರ್ ಫ್ರೇಮ್ ವರ್ಕ್‌ನಲ್ಲೇ ಇವರು ಸ್ಟ್ಯಾಂಡಿಂಗ್ ಆರ್ಡರ್ ಮಾಡಬೇಕು ಎಂದು ಹೇಳುತ್ತಾರೆ. Consulting with whom? Worker or Trade Union? Which Trade Union? Which worker? ಮಾಡೆಲ್ ಆರ್ಡರ್ಸ್ ಈಗಾಗಲೇ ಸ್ಟ್ಯಾಂಡಿಂಗ್ ಇರುವಾಗ ಮತ್ತೆ ಈ ಅಮೆಂಡ್‌ಮೆಂಟ್ ಎಕೆ? ಅದನ್ನೂ ತೆಗೆದಿದ್ದಾರೆ. on parr with the Law ಎಂದಾದರೂ ಇರಬೇಕು. ರೆಕಾಗ್ನೈಸ್ ಯುನಿಯನ್ ಅಂತಲೂ ಇಲ್ಲ. ಮೆಜಾರಿಟಿ ವರ್ಕರ್ಸ್ ಅಂತಲೂ ಇಲ್ಲ. ಇದು ಸಂಪೂರ್ಣವಾಗಿ ಸರ್ಕಾರ Washing off their hands. ಸರ್ಕಾರಕ್ಕೆ ಎನೂ ಜವಾಬ್ದಾರಿ ಬೇಡ ಕಾರ್ಮಿಕರ ಇಡೀ ಭವಿಷ್ಯವನ್ನು ಮ್ಯಾನೇಜ್‌ಮೆಂಟ್‌ನ ಕೈಯಲ್ಲಿ ಇಟ್ಟು ಬಿಡೋಣ. ಅವರು ಗುಲಾಮರಂತೆ ಕೆಲಸ ಮಾಡಬೇಕು. ಅವರ ಗುಲಾಮರಂತೆ ಇರದಿದ್ದರೆ ನಿಮ್ಮನ್ನು ಮನೆಗೆ ಕಳುಹಿಸುತ್ತೇವೆ. ಇಲ್ಲ ಎಂದರೆ ಫ್ಯಾಕ್ಟರಿ ಮುಚ್ಚಿಕೊಂಡು ಹೋಗುತ್ತೇವೆ ಎಂದು ಹೇಳುತ್ತಾರೆ. For this you brought this Bill? ನಾಳೆ ಕಾರ್ಮಿಕರು ಮಾಲೀಕರ ಗುಲಾಮರಂತೆ ವರ್ತನೆ ಮಾಡಬೇಕು. ಅವರು ಸ್ಟ್ರೈಕ್ ಮಾಡುವ ಹಕ್ಕೆಲ್ಲ ಈಗಾಗಲೇ ನೀವು ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್‌ನಲ್ಲಿ ಅಮೆಂಡ್‌ಮೆಂಟ್ ಮಾಡಿ ಪಬ್ಲಿಕ್ ಯುಟಿಲಿಟಿ ಸರ್ವೀಸ್ ಎಂದು ಹೇಳಿ ಆಟೋಮೊಬೈಲ್ ಇಂಡಸ್ಟ್ರಿಯನ್ನು ಪಬ್ಲಿಕ್ ಯುಟಿಲಿಟಿ ಎಂದು ಡಿಕ್ಲೇರ್ ಮಾಡಿ ನೀವು ಶೆಡ್ಯೂನಲ್ಲಿ ಸೇರಿಸಿದ್ದೀರಿ. That itself is against the rights of the workers. ಮತ್ತೆ ಇದನ್ನೂ ತಂದು ಸಂಪೂರ್ಣವಾಗಿ ಅವರನ್ನು ಮಾಲೀಕರಿಗೆ ಗುಲಾಮರನ್ನಾಗಿ ಮಾಡಬೇಕು ಎಂದು ಹೇಳತಕ್ಕ ಉದ್ದೇಶದಿಂದ ಇದನ್ನು ತಂದಿದ್ದೀರಿ.

Not in the interest of the workers. ದಯವಿಟ್ಟು ಈ ಬಿಲ್ಲನ್ನು ವಾಪಸ್ ತೆಗೆದುಕೊಳ್ಳಿ. ನಾವು ಇದನ್ನು ಒಪ್ಪಲಿಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್. ರಾಜೇಂದ್ರನ್ : ಸಾರ್ ಒಂದು ನಿಮಿಷ ಮಾನ್ಯ ಸಚಿವರೇ, ತಾವು ಮಾಡೆಲ್ ಮಾಡಿ ಕಳುಹಿಸುತ್ತೀರಿ. ಆ ಮಾಡೆಲ್ ಈಸ್ ಫೈನಲ್ ಪುನಃ ಮತ್ತೆ ಅದಕ್ಕೆ ಎಕೆ ಛೇಂಜ್ ಕೊಡುತ್ತೀರಿ? Why? What is the necessity? Once the Government is framed, ofter that there is a dispute. Again, ಮತ್ತೆ ಬರಬೇಕೆಂದು ಏಕೆ ಮಾಡಿದಿರಿ?

ಶ್ರೀ ವಾಟಾಳ್ ನಾಗರಾಜ್ : ಯಾರ ಪರವಾಗಿ ಇದನ್ನು ತಂದಿದ್ದೀರಿ?

ಶ್ರೀ ತನ್ವೀರ್ ಸೇಠ್ : ಮಸೂದೆಯ ಬಗ್ಗೆ ಎನು ತಿದ್ದುಪಡಿ ಇದೆ ಅದನ್ನು ನಾನು ಮಂಡನೆ ಮಾಡಿದ್ದೇನೆ. ಪ್ರಶ್ನೆಗಳು ಏನು ಬಂದಿವೆ ಅದಕ್ಕೆ ನಾನು ಉತ್ತರವನ್ನು ಕೊಡುತ್ತಿದ್ದೇನೆ. ಇಲ್ಲಿ ಎನಾಗುತ್ತದೆ? ಮಾನ್ಯ ಶ್ರೀರಾಮರೆಡ್ಡಿ ಅವರಿಗೆ ಕಾರ್ಮಿಕ ಸಂಘಟನೆಯ ಹಿನ್ನೆಲೆ When a Trade Union has concept of bargaining. ಬಾರ್ಗೇನಿಂಗ್ ಪವರ್ಸ್ ಇದೆ, ಅದನ್ನು ನಾನು ಮುಟ್ಟುಗೋಲು ಹಾಕಬೇಕು ಎಂದು ಹೇಳಿದರೆ ಅದನ್ನು ಸಹ ನೀವು ಹೇಳಿದ ಮೇಲೆ ಮಾಡಲೇ ಬೇಕಾಗುತ್ತದೆ. ನಾನು ಈ ಕಾರ್ಮಿಕ ಇಲಾಖೆ ರೂಪಿಸಿರುವಂತಹ ಮಾಡೆಲ್ ಸ್ಟ್ಯಾಂಡಿಂಗ್ ಆರ್ಡರ್ ಬಗ್ಗೆ ಹೇಳುತ್ತೇನೆ. ಮಾನ್ಯ ಜಯಪ್ರಕಾಶ್ಹೆಗ್ಡೆಯವರೇ, ತಮ್ಮ ಪ್ರಶ್ನೆ ಎನು ಇತ್ತು. ಮಾಡೆಲ್ ಸ್ಟ್ಯಾಂಡಿಂಗ್ ಆರ್ಡರ್ಸ್ ಎಂದು ಎನು ಮಾಡಿರುತ್ತೇನೆ ಅದನ್ನು ಮಾಲೀಕರು ನೇರವಾಗಿ ಒಪ್ಪಿಕೊಳ್ಳುವಂತಹದು ಆಗುತ್ತದೆ. Because. The Law of the land. ಆದರೆ ಕಾರ್ಮಿಕ ಸಂಘಟನೆಗಳು ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಯಾವಾಗ ಕ್ಯಾಶುಯಲ್ ಲೀವ್ ಇದೆ, ಸಿಕ್ ಲೀವ್ ಇದೆ ಇದನ್ನು ಯಾವ ರೀತಿ ಉಪಯೋಗ ಮಾಡಬೇಕು ಮತ್ತು ನ್ಯಾಶನಲ್ ಹಾಲಿಡೇಸ್ ಬಿಟ್ಟು ಮತ್ತೆ ಇನ್ನೇನು ಜಾಸ್ತಿ ಹಾಲಿಡೇಸ್ ಬಿಟ್ಟು ಮತ್ತೆ ಇನ್ನೇನು ಜಾಸ್ತಿ ಹಾಲಿಡೇಸ್ ಬೇಕಾಗುತ್ತದೆ ಒಂದು ಕಠಿಣವಾದಂತಹ ಕ್ರಮ ತೆಗೆದುಕೊಳ್ಳುವಂತಹ ಸಂದರ್ಭದಲ್ಲಿ ಅವರ ಮೇಲೆ ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ ಅಥವಾ ಒಂದು ಡೊಮೆಸ್ಟಿಕ್ ಎನ್‌ಕ್ವೈರಿ ಮಾಡುವಂತಹ ಸಂದರ್ಭದಲ್ಲಿ ಎಷ್ಟು ತಿಂಗಳು ಒಳಗಡೆ ಹಾಕಬೇಕಾಗುತ್ತದೆ? ನಾನು ಮೂರು ತಿಂಗಳೊಳಗಡೆ ಮಾಡಬೇಕು. ಎಂದು ಮಾಡೆಲ್‌ನಲ್ಲಿ ಬರೆದಿರುತ್ತೇವೆ. ಅವರು ಇಲ್ಲ ನಮಗೆ ಆರು ತಿಂಗಳಾದರೂ ಅವಕಾಶ ಕೊಡಬೇಕು. ಅಥವಾ ಎರಡು ತಿಂಗಳ ಒಳಗಡೆ ಮಾಡಬೇಕು ಎಂದು ಹೇಳಿ ಯಾವಾಗ ಸಣ್ಣ ಪುಟ್ಟ ಯಾವುದೇ ಒಂದು ಸಬ್‌ಕ್ಲಾಸ್‌ಗೆ ಛೇಂಜಸ್ ಆಗುತ್ತದೆ ಅಂತಹ ಸಂದರ್ಭದಲ್ಲಿ ಮಾತ್ರ ನನ್ನ ಹತ್ತಿರ ಬರಬೇಕು. ಈವರೆವಿಗೂ ಎನಾಗಿದೆ ಅಂದರೆ I am unable to assess. ಇವತ್ತು ಆಗಿರುವಂತಹ ವಿಚಾರ, ವಿನಾಕಾರಣ ಡಿಲೇ ಆಗುವಂತಹದು. ಪ್ರತಿ ಒಂದು ನನ್ನ ಹತ್ತಿರ ಬರಬೇಕು. ಸರಿ ಯಾಗಿರುವುದು, ಒಪ್ಪಂದ ಆಗಿರುವಂತಹದು ಎನಾಗುತ್ತದೆ ಅಂದರೆ ನಾನು ಅಟ್‌ಸ್ಟೇಷನ್ ಮಾಡಿಕೊಡದೇ ಅದು ಜಾರಿಗೆ ಬರುವುದಿಲ್ಲ ಇದೆಲ್ಲಾ ಕಾರಣಗಳಿಂದ ಕಾರ್ಮಿಕರಿಗೆ ಆಗಿರುವಂತಹ ತೊಂದರೆಯನ್ನು ನಾವು ಮುಂದಿಟ್ಟುಕೊಂಡು Where there will be dispute on any one of the clauses, ಆಗ ಮಾತ್ರ ನನ್ನ ಹತ್ತಿರ ಬನ್ನಿ ಇಲ್ಲ ಎಂದರೆ

ನೇರವಾಗಿ ಒಪ್ಪಿಕೊಂಡು it will come in to practice ಎನ್ನುವುದನ್ನು ನಾನು ಮಾಡಿರುವಂತಹದು. ಇದರಲ್ಲಿ ಯಾರ ಪರ ಎನ್ನುವುದನ್ನು ನೀವೀಗ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಯಾವತ್ತಿನಿಂದ ಇದು ಜಾರಿಗೆ ಬರುತ್ತದೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ನೀವು ರೆಕಾಗ್ನೈಸ್ ಯೂನಿಯನ್ ಎಂದು ಏಕೆ ಸೇರಿಸಲಿಲ್ಲ?

ಶ್ರೀ ತನ್ವೀರ್ ಸೇಠ್ : ನಾನು ಹೇಳುತ್ತೇನೆ ಕೇಳಿ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ರೆಕಗ್ನೈಸ್ಡ್ ಯೂನಿಯನ್ ಎಂದು ಸೇರಿಸಿ ಅಥವಾ ಮೆಜಾರಿಟಿ ಎಂದು ಸೇರಿಸಿ.

ಶ್ರೀ ತನ್ವೀರ್ ಸೇಠ್ : ರಾಜ್ಯದಲ್ಲಿ ಸುಮಾರು 3960 ರಷ್ಟು ಟ್ರೇಡ್ ಯೂನಿಯನ್ಸ್ ನನ್ನ ಇಲಾಖೆಯಲ್ಲಿ ನೊಂದಾಯಿಸಿಕೊಂಡಿದ್ದಾರೆ. ವರ್ಷ ವರ್ಷ ಅವರು ನೀಡಬೇಕಾಗಿರುವಂತಹ ರಿಟರ್ನ್ಸ್ ಏನು ಇದೆ ಅದನ್ನು ಕೇವಲ 162 ಟ್ರೇಡ್ ಯೂನಿಯನ್ಸ್ ಮಾತ್ರ ಸಲ್ಲಿಸಿರುವಂತಹದು ಈಗ ಬೇರೆ ಟ್ರೇಡ್ ಯೂನಿಯನ್ಸ್‌ಗೆ ನಾನು ರೆಕಾಗ್ನೈಸ್ ಮಾಡಬೇಕೋ ಬೇಡವೋ ?

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಇದು ನಿಮ್ಮ ಕಾನೂನಿನ ವ್ಯಾಪ್ತಿಯಲ್ಲಿ .

ಉಪಾಧ್ಯಕ್ಷರು : ಈಗ ಏನು ಮಾಡೋಣ ಮಾನ್ಯ ತನ್ವೀರ್ ಸೇಠ್‌ರವರೆ?

ಶ್ರೀ ತನ್ವೀರ್ ಸೇಠ್ : ಇದರ ಜೊತೆಗೆ ಇದರಲ್ಲಿ 'ಟ್ರೇಡ್ ಯೂನಿಯನ್' ಎಂಬ ಪದ ಇದೆ ಅದನ್ನು I am bringing the change for " Registered Trade Union", to provide provisions ffor drafting standing order by the employer and discuss with a Registered Trade Union provided thr Trade Union has been 'Registered and Recognized' ಈ ಎರಡೂ ಪದಗಳನ್ನು ಸೇರಿಸಿ ವಿಧೇಯಕವನ್ನು ಅಂಗೀಕರಿಸಬೇಕಾಗಿ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ "2005ರ ಕೈಗಾರಿಕಾ ನಿಯೋಜನೆ (ಸ್ಥಾಯಿ ಆದೇಶಗಳು) (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯೊಂದಿಗೆ ಪರ್ಯಾಲೋಚಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 3ಕ್ಕೆ ತಿದ್ದುಪಡಿ

ಶ್ರೀ ತನ್ವೀರ್ ಸೇಠ್ : ನಾನು ಖಂಡ (3)ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ.

ಖಂಡ 3ರಲ್ಲಿ "ಕಾರ್ಮಿಕ ಸಂಘಗಳಿಗೆ" ಬದಲಾಗಿ "ನೋಂದಾಯಿತ(ರಿಜಿಸ್ಟರ್ಡ್) ಮತ್ತು ಮಾನ್ಯತೆ ಪಡೆದ (ರೆಕಗ್ನೈಸ್) ಕಾರ್ಮಿಕ ಸಂಘಟನೆಗಳು" ಎಂದು ಸೇರಿಸತಕ್ಕದ್ದು"

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ

ಖಂಡ 3ರಲ್ಲಿ "ಕಾರ್ಮಿಕ ಸಂಘಗಳಿಗೆ" ಬದಲಾಗಿ "ನೋಂದಾಯಿತ(ರಿಜಿಸ್ಟರ್ಡ್) ಮತ್ತು ಮಾನ್ಯತೆ ಪಡೆದ (ರೆಕಗ್ನೈಸ್) ಕಾರ್ಮಿಕ ಸಂಘಟನೆಗಳು" ಎಂದು ಸೇರಿಸತಕ್ಕದ್ದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 3ಕ್ಕೆ ತಿದ್ದುಪಡಿಯಾದ ರೀತಿಯಲ್ಲಿ :

ಉಪಾಧ್ಯಕ್ಷರು : ಪ್ರಸ್ತಾವ ಎನೆಂದರೆ,

ಖಂಡ 3 ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಖಂಡ 3, ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ 4 ರಿಂದ 12ರ ವರೆಗೆ

ಉಪಾಧ್ಯಕ್ಷರು : ಪ್ರಸ್ತಾವ ಎನೆಂದರೆ,

"ಖಂಡ 4 ರಿಂದ 12ರ ವರೆಗೆ, ಎರಡೂ ಸ್ಥೆರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 4 ರಿಂದ 12ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು : ಪ್ರಸ್ತಾವ ಎನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ತನ್ವೀರ್ ಸೇಠ್ (ಕಾರ್ಮಿಕ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, 2005ರ ಕೈಗಾರಿಕಾ ನಿಯೋಜನೆ (ಸ್ಥಾಯಿ ಆದೇಶಗಳು) (ಕರ್ನಾಟಕ ತಿದ್ದುಪಡಿ) ವಿಧೇಯಕದಲ್ಲಿ 'ಕಾರ್ಮಿಕ ಸಂಘಟನೆಗಳು' ಎಂದು ಇರುವ ಕಡೆಗಳಲ್ಲಿ 'ರಿಜಿಸ್ಟರ್ಡ್' ಎಂಬ ಪದವನ್ನು ಸೇರಿಸಿ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ರೆಕಗ್ನೈಸ್ಡ್ ಎಂಬುದನ್ನು ಸೇರಿಸಬೇಕು.

ಶ್ರೀ ತನ್ವೀರ್ ಸೇಠ್ : ರೆಕಗ್ನೈಸ್ಡ್ ಎಂಬುದು ಯಾವುದೂ ಇಲ್ಲ. ಅದು ತಮಗೆ ಗೊತ್ತಿದೆ. Registered is recognized.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ನೀವು ಆಗಲೇ ಒಪ್ಪಿಕೊಂಡಿದ್ದೀರಿ. ಆದರೂ ಈಗ ಮತ್ತೆ . . . No, No. I am sorry. All the registered unions are not recognized by the workers through the secret ballet. Please try to understand. ನೀವು ಆಗಲೇ ಒಪ್ಪಿದ್ದೀರಿ. ಆಮೇಲೆ ನೀವು ಅಧಿಕಾರಿಗಳ ಬಳಿಗೆ ಹೋಗಿ, ಅಧಿಕಾರಿಗಳು ಹೇಳಿದರೆಂದು ಇಲ್ಲಿಗೆ ಬಂದು ಹೇಳಿದರೆ ಹೇಗೆ?

ಉಪಾಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೆ, ಅವರು ಈಗ ಒಪ್ಪಿಕೊಂಡಿದ್ದಾರೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಅದರಲ್ಲಿ registered recognized unions ಎಂದು ಬರೆಯಿರಿ.

ಶ್ರೀ ತನ್ವೀರ್ ಸೇಠ್ (ಕಾರ್ಮಿಕ ಹಾಗೂ ಹಜ್ ರಾಜ್ಯ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, 2005ರ ಕೈಗಾರಿಕಾ ನಿಯೋಜನೆ (ಸ್ಥಾಯಿ ಆದೇಶಗಳು) (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಎನೆಂದರೆ "2005ರ ಕೈಗಾರಿಕಾ ನಿಯೋಜನೆ (ಸ್ಥಾಯಿ ಆದೇಶಗಳು) (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಅಂಗೀಕರುಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ತಿದ್ದುಪಡಿಯೊಂದಿಗೆ ಒಪ್ಪಿಗೆ ನೀಡಲಾಯಿತು.

(ಅನುಬಂಧ V)

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, ಈಗ ಎಕೋ situation ಸರಿಯಾಗಿಲ್ಲ.

ಉಪಾಧ್ಯಕ್ಷರು : ಇಲ್ಲ, ಚೆನ್ನಾಗಿದೆ, ತಾವು ಕುಳಿತುಕೊಳ್ಳಿ, ಈಗ ಮಾನ್ಯ ಮಾಧುಸ್ವಾಮಿಯವರೂ ಒಳಗೊಂಡಂತೆ ಇನ್ನು ಅನೇಕ ಮಿತ್ರರು ಸೇರಿ ಊಟಕ್ಕೆ ಕರೆದಿದ್ದಾರೆ. ಇವೊತ್ತು ಬಹಳ ಒಳ್ಳೆಯ ದಿವಸ ಕೂಡ ಆಗಿದೆ. ತಾವು ಕುಳಿತುಕೊಳ್ಳಿ. ಇನ್ನೊಂದು ಇದೆ.

(ಗೊಂದಲ)

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಲಂಚ್ ಅನಂತರ ಮಾಡೋಣ.

(ಗೊಂದಲ)

6. ಪ್ರಕಟಣೆ,

ಉಪಾಧ್ಯಕ್ಷರು : ಆಯಿತು, ಈಗ ಒಂದು ಪ್ರಕಟಣೆ ಇದೆ. ಮಾನ್ಯ ಮಾಧುಸ್ವಾಮಿ ಮತ್ತು ಎಂ. ಪಿ. ನಾಡಗೌಡರು ಹಾಗೂ ಇತರರು ಬಾಂಕ್ವೆಟ್ ಹಾಲ್‌ನಲ್ಲಿ 1.30 ಗಂಟೆಗೆ ಊಟಕ್ಕೆ ಕರೆದಿದ್ದಾರೆ. ಈಗಾಗಲೇ 1.45 ಗಂಟೆಯಾಗಿದೆ.

ಈಗ ಸದನವನ್ನು ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 1.45 ಗಂಟೆಗೆ ಮುಂದೂಡಲ್ಪಟ್ಟು, ಪುನಃ ಮಧ್ಯಾಹ್ನ 3.00 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಪುನಃ 3 ಗಂಟೆ 5 ನಿಮಿಷಕ್ಕೆ ಸಮಾವೇಶಗೊಂಡಿತು)

(ಮಾನ್ಯ ಅಧ್ಯಕ್ಷರು, ಶ್ರೀ ಕೃಷ್ಣರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)